
# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಏಪ್ರಿಲ್ 04, 2022

ಸಂಪುಟ : 48 ಸಂಚಿಕೆ : 323 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

**ಕಂಡನಾ ಚಂದಿರ...**

ಜಿಲ್ಲಾದ್ಯಂತ ಯುಗಾದಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಶನಿವಾರವೇ ಚಂದ್ರನದರ್ಶನವಾಗುತ್ತದೆ ಎಂದು ಹಲವರು ನಿರೀಕ್ಷಿಸಿದ್ದು ಹುಸಿಯಾಯಿತು. ಭಾನುವಾರ ಸಂಜೆ ದಾವಣಗೆರೆಯ ಬಡಾವಣೆಯೊಂದರಲ್ಲಿ ಚಂದ್ರದರ್ಶನಕ್ಕೆ ಕಾದು ಕುಳಿತ ದೃಶ್ಯವಿದು. ಅಂತೂ 6.45ರ ವೇಳೆಗೆ ಚಂದ್ರದರ್ಶನವಾಯಿತು.

# ಭುಗಿಲೆದ್ದ ಲೌಡ್ ಸ್ಪೀಕರ್ ವಿವಾದ

## ಮಹಾರಾಷ್ಟ್ರದಲ್ಲಿ ಹನುಮಾನ್ ಚಾಲಿಸಾ ಮೊಳಗಿಸಿದ ಎಂ.ಎನ್.ಎಸ್. ಮುಖಂಡನ ಬಂಧನ, ದಂಡ

ಮುಂಬೈ, ಏ. 3 – ಕರ್ನಾಟಕದಲ್ಲಿ ಹಿಜಾಬ್ ಹಾಗೂ ಹಲಾಲ್ ವಿವಾದಗಳು ಸುದ್ದಿ ಮಾಡಿದ್ದರೆ, ಪಕ್ಕದ ಮಹಾರಾಷ್ಟ್ರದಲ್ಲಿ ಲೌಡ್ ಸ್ಪೀಕರ್ ವಿವಾದ ಭುಗಿಲೆದ್ದಿದೆ.

ಮಸೀದಿಗಳಲ್ಲಿನ ಲೌಡ್ ಸ್ಪೀಕರ್‌ಗಳನ್ನು ತೆಗೆಸಬೇಕು. ಇಲ್ಲದಿದ್ದರೆ ಲೌಡ್ ಸ್ಪೀಕರ್‌ಗಳ ಮೂಲಕ ಹನುಮಾನ್ ಚಾಲಿಸಾ ಘೋಷಣೆಗಳನ್ನು ಮೊಳಗಿಸುವುದಾಗಿ ಮಹಾರಾಷ್ಟ್ರ ನವನಿರ್ಮಾಣ ಸೇನೆ (ಎಂ.ಎನ್.ಎಸ್.) ಪಕ್ಷದ ನಾಯಕ ಉದ್ಧವ್ ಠಾಕ್ರೆ ನಿನ್ನೆ ಹೇಳಿದ್ದರು.

ಭಾನುವಾರದಂದು ಎಂ.ಎನ್.ಎಸ್.ನ ಕಚೇರಿ ಹೊರಗೆ ಲೌಡ್ ಸ್ಪೀಕರ್ ಅಳವಡಿಸಿ ಹನುಮಾನ್ ಚಾಲಿಸಾ ಮೊಳಗಿಸಲಾಗಿತ್ತು. ಕಾರ್ಯತತ್ಪರರಾದ ಪೊಲೀಸರು, ಎಂ.ಎನ್.ಎಸ್. ಮುಖಂಡ ಮಹೇಂದ್ರ ಭಾನುಶಾಲಿ ಅವರನ್ನು ಬಂಧಿಸಿದ್ದಾರೆ.



ಅನುಮತಿ ಪಡೆಯದೇ ಲೌಡ್ ಸ್ಪೀಕರ್ ಅಳವಡಿಸಲಾಗಿದೆ ಎಂದು ಹೇಳಿರುವ ಪೊಲೀಸರು, ಆಂಪ್ಲಿಫೈಯರ್ ಹಾಗೂ ಲೌಡ್ ಸ್ಪೀಕರ್‌ಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ಮಹೇಂದ್ರ ಭಾನುಶಾಲಿ, ಮುಂಬರುವ ದಿನಗಳಲ್ಲಿ ಲೌಡ್‌ಸ್ಪೀಕರ್ ಮೂಲಕ 'ಜೈ ಶ್ರೀ ರಾಮ್' ಮೊಳಗಿಸುವುದಾಗಿ ಹೇಳಿದ್ದಾರೆ.

ನಾನಷ್ಟೇ ಅಲ್ಲ, ಯಾರೊಬ್ಬರೂ ಅನುಮತಿ ಪಡೆಯುವುದಿಲ್ಲ. ಹೀಗಾಗಿ ಯಾರೊಬ್ಬರ ವಿರುದ್ಧವೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ನನ್ನ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ, ಉಳಿದವರ ಮೇಲೂ ಕ್ರಮ ತೆಗೆದುಕೊಳ್ಳಬೇಕು ಎಂದು ಮಹೇಂದ್ರ ಭಾನುಶಾಲಿ ಒತ್ತಾಯಿಸಿದ್ದಾರೆ.

ಬಂಧನದ ನಂತರ ಎಂ.ಎನ್.ಎಸ್. ಮುಖಂಡನಿಗೆ ಪೊಲೀಸರು 5,050 ರೂ.ಗಳ ದಂಡ ವಿಧಿಸಿದ್ದಾರೆ. ಅಲ್ಲದೇ, ಮತ್ತೆ ಲೌಡ್ ಸ್ಪೀಕರ್ ಅಳವಡಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳುವುದಾಗಿ ಎಚ್ಚರಿಸಿದ್ದಾರೆ. ಸರ್ಕಾರ ಎಲ್ಲಾ ಲೌಡ್‌ಸ್ಪೀಕರ್‌ಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದೇ ಹೋದರೆ ಮಸೀದಿಗಳ ಎದುರು ದೊಡ್ಡ ಸ್ಪೀಕರ್‌ಗಳಲ್ಲಿ ಹನುಮಾನ್ ಚಾಲಿಸಾ ನುಡಿಸಲಾಗುವುದು ಎಂದು ಮಹೇಂದ್ರ ಭಾನುಶಾಲಿ ಎಚ್ಚರಿಸಿದ್ದಾರೆ.

## ಹನುಮ ಜಯಂತಿ, ರಾಮನವಮಿ ಆಚರಣೆಗೆ ಮುಂದಾದ ಕಾಂಗ್ರೆಸ್

ಭೂಪಾಲ್, ಏ. 3 – ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯ ಸಿದ್ಧತೆಯಲ್ಲಿರುವ ರಾಜ್ಯ ಕಾಂಗ್ರೆಸ್, ಮುಂಬರುವ ರಾಮ ನವಮಿ ಹಾಗೂ ಹನುಮಾನ್ ಜಯಂತಿಯನ್ನು ಜನರ ಸಮೂಹದ ನಡುವೆ ಆಚರಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದೆ. ಅಲ್ಲದೇ, ರಾಮಾಯಣದ ಭಾಗವಾದ ಸುಂದರಕಾಂಡ ಮತ್ತು ಹನುಮಾನ್ ಚಾಲಿಸಾಗಳನ್ನು ಪಠಿಸುವಂತೆ ತಿಳಿಸಿದೆ.

**ಹನುಮಾನ್ ಚಾಲಿಸಾ ಪಠಿಸಲು ಕಾರ್ಯಕರ್ತರಿಗೆ ಸೂಚನೆ**

ಕಾಂಗ್ರೆಸ್ ರಾಜ್ಯಾಧ್ಯಕ್ಷ ಕಮಲ್ ನಾಥ್ ಅವರ ಪರವಾಗಿ ಕಾರ್ಯಕರ್ತರಿಗೆ ಪತ್ರ ಬರೆಯಲಾಗಿದ್ದು, ಏಪ್ರಿಲ್ 10ರಿಂದ 16ರ ನಡುವೆ ರಾಮನವಮಿ ಹಾಗೂ (4ನೇ ಪುಟಕ್ಕೆ)

## ಅಣ್ಣಾಮಲೈ ವಿವಿ ದೂರ ಶಿಕ್ಷಣ ನೀಡದಂತೆ ನಿರ್ಬಂಧ

ನವದೆಹಲಿ, ಏ. 3 – ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾನಿಲಯ ಉನ್ನತ ಶಿಕ್ಷಣ ನಿಯಂತ್ರಕರಿಂದ ಅನುಮೋದನೆ ಪಡೆದಿಲ್ಲ. ವಿಶ್ವವಿದ್ಯಾನಿಲಯದಲ್ಲಿ ದೂರಶಿಕ್ಷಣಕ್ಕೆ ಪ್ರವೇಶ ಪಡೆಯದಂತೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ (ಯು.ಜಿ.ಸಿ.) ತಿಳಿಸಿದೆ.

ಯು.ಜಿ.ಸಿ. ಅನುಮತಿ ಪಡೆಯದೇ ದೂರಶಿಕ್ಷಣ ಪಡೆಯುವುದು ನಿಯಮಗಳ ಉಲ್ಲಂಘನೆಯಾಗಿದೆ. 2014-15ರವರೆಗೆ ಮಾತ್ರ ವಿಶ್ವವಿದ್ಯಾನಿಲಯ ದೂರಶಿಕ್ಷಣಕ್ಕೆ ಅನುಮತಿ ಹೊಂದಿತ್ತು ಎಂದು ವಿಶ್ವವಿದ್ಯಾನಿಲಯ ಹೇಳಿದೆ.

# ಸಮಸ್ಯೆಗಳನ್ನು ಎದುರಿಸುವ ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ



**ತರಳಬಾಳು ಶ್ರೀ**

ರಾಣೇಬೆನ್ನೂರು,ಏ.3- ಮನುಷ್ಯ ಸಮಸ್ಯೆಗಳನ್ನು ಎದುರಿಸುವ ಆತ್ಮಸ್ಥೈರ್ಯ ಬೆಳೆಸಿಕೊಳ್ಳಬೇಕು ಎಂದು ಸಿರಿಗೆರೆ ತರಳಬಾಳು ಬೃಹನ್ಮಠದ ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ನುಡಿದರು.

ದಂಡಿಗಿಹಳ್ಳಿ ಗ್ರಾಮದಲ್ಲಿ ಭಾನುವಾರ ಶ್ರೀ ಬಸವೇಶ್ವರ ದೇವಸ್ಥಾನದ ಉದ್ಘಾಟನೆ, ಕಳಸಾರೋಹಣ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಏರ್ಪಡಿಸಲಾಗಿದ್ದ ಧರ್ಮಸಭೆ ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಮನುಷ್ಯನನ್ನು ಎಲ್ಲಾ ಪ್ರಾಣಿಗಳಿಗೆ ಹೋಲಿಕೆ ಮಾಡಲಾಗುತ್ತದೆ. ಆದರೆ ಆತನಲ್ಲಿ ಪ್ರಾಣಿಗಳಿಂತ ಕೆಟ್ಟ ಗುಣಗಳಿದ್ದು, ಅತ್ಯಂತ ಕ್ರೂರಿಯಾಗಿದ್ದಾನೆ. ನೈತಿಕ ಮಾರ್ಗದಲ್ಲಿ ಸಾಗುವುದೇ ಧರ್ಮ. ಕಲಿಯುಗದಲ್ಲಿಯೂ ಒಳ್ಳೆಯ ಜನರಿದ್ದಾರೆ. ಹೃದಯ ಮತ್ತು ಬುದ್ಧಿ ನಡುವೆ ನಿರಂತರ ಸಂಘರ್ಷ ನಡೆಯುತ್ತಿರುತ್ತದೆ. ನಮ್ಮ ಶರೀರ ಕಸದ ಬುಟ್ಟಿಯಾಗಬಾರದು. ನಮ್ಮೊಳಗಿನ ಆತ್ಮಕ್ಕೆ ಉತ್ತಮ ಸಂಸ್ಕಾರ ನೀಡಬೇಕು, ಶರಣರ ಮಾತುಗಳನ್ನು ಆಚರಣೆಗೆ ತರಬೇಕು ಎಂದರು.

ಕಣ್ವಕುಪ್ಪಿ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯರು ಮಾತನಾಡಿ, ಪ್ರತಿಯೊಬ್ಬರೂ ಜ್ಞಾನವೆಂಬ ತುಂಬಿದ ಕೊಡವಾಗಬೇಕು. ನಾವು ಮಾಡಿದ ಪುಣ್ಯ ನಮ್ಮನ್ನು ಜೀವನದುದ್ದಕ್ಕೂ ಕಾಪಾಡುತ್ತದೆ. ಶಿಲ್ಪಿ ಕೆತ್ತಿದ ಕಲ್ಲಿಗೆ ಸಂಸ್ಕಾರ ನೀಡಿದಾಗ ದೇವರ ಮೂರ್ತಿಯಾಗುತ್ತದೆ. ಮನುಷ್ಯ ತಾನು ಮಾಡಿದ ತಪ್ಪು, ಅಪರಾಧಗಳನ್ನು ದೇವರ ಸಾನ್ನಿಧ್ಯದಲ್ಲಿ ಮಾತ್ರ ಹಂಚಿಕೊಳ್ಳುತ್ತಾನೆ ಎಂದರು.

ಕೃಷಿ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ, ನಮ್ಮ ದೇಶದಲ್ಲಿ ಅನ್ನ (2ನೇ ಪುಟಕ್ಕೆ)

## ಚಂಡೀಘಡಕ್ಕಾಗಿ ಪಂಜಾಬ್‌ಗೆ ಹರಿಯಾಣ ಸೆಡ್ಡು

ಚಂಡೀಘಡ, ಏ. 3 – ಕೇಂದ್ರಾಡಳಿತ ಪ್ರದೇಶವಾದ ಚಂಡೀಘಡಕ್ಕೆ ಸಂಬಂಧಿಸಿದಂತೆ ಪಂಜಾಬ್ ಹಾಗೂ ಹರಿಯಾಣ ನಡುವಿನ ಚಕಮಕಿ ಉಲ್ಬಣಿಸಿದೆ. ಚಂಡೀಘಡವನ್ನು ಪಂಜಾಬ್‌ಗೆ ಸೇರ್ಪಡೆ ಮಾಡುವಂತೆ ಆಮ್ ಆದ್ಮಿ ಪಾರ್ಟಿಯ ಸರ್ಕಾರ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿತ್ತು. ಅದೇ ರೀತಿಯ ಕ್ರಮಕ್ಕೆ ಹರಿಯಾಣ ಸರ್ಕಾರ ಮುಂದಾಗಿದೆ.

ಏಪ್ರಿಲ್ 5ರಂದು ವಿಧಾನಸಭೆಯ ಒಂದು ದಿನದ ವಿಶೇಷ ಅಧಿವೇಶನ ಕರೆಯಲಾಗಿದೆ ಎಂದು ಸಾರಿಗೆ ಸಚಿವ (2ನೇ ಪುಟಕ್ಕೆ)

# ದಾವಣಗೆರೆ-ಹರಿಹರ ಅರ್ಬನ್ ಸಹಕಾರಿಗೆ 8.60 ಕೋಟಿ ರೂ. ಲಾಭ

ದಾವಣಗೆರೆ, ಏ.3- ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್, 2022 ಮಾರ್ಚ್ ಅಂತ್ಯಕ್ಕೆ 8.62 ಕೋಟಿ ರೂ. ಲಾಭ ಗಳಿಸಿರುವ ಬಗ್ಗೆ ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಎನ್.ಎ. ಮುರುಗೇಶ್ ಸಂತಸ ವ್ಯಕ್ತಪಡಿಸಿದ್ದಾರೆ.

ಈ (2ನೇ ಪುಟಕ್ಕೆ)

**ಸುವರ್ಣ ಮಹೋತ್ಸವದ ಸಂಭ್ರಮದಲ್ಲಿ**



**ನಮ್ಮ ಬ್ಯಾಂಕ್ ಈ ವರ್ಷ 50ನೇ ವರ್ಷಾಚರಣೆಯ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದ್ದು, ಇದರ ಸವಿ ನೆನಪಿಗಾಗಿ ಬ್ಯಾಂಕಿನ ಷೇರುದಾರರಿಗೆ ಶೇ. 20 ರಂತೆ ಲಾಭಾಂಶ ನೀಡಲು ಬ್ಯಾಂಕಿನ ಆಡಳಿತ ಮಂಡಳಿ ಚಿಂತಿಸಿದ್ದು, ಈ ಬಗ್ಗೆ ಬರುವ ಮಹಾಸಭೆಯಲ್ಲಿ ಸರ್ವ ಸದಸ್ಯರ ಅಭಿಪ್ರಾಯ ಪಡೆದು ತೀರ್ಮಾನಿಸಲಾಗುವುದು.**

**- ಎನ್.ಎ. ಮುರುಗೇಶ್, ಅಧ್ಯಕ್ಷರು**

# ಹರಿಹರೇಶ್ವರ ದೇವಾಲಯದಲ್ಲಿ ಜಿಲ್ಲಾಧಿಕಾರಿ ಪೂಜೆ

## ಅಮರಾವತಿಯಲ್ಲಿ ರಾಗಿ ಖರೀದಿ ಕೇಂದ್ರ ತೆರೆಯಲು ಜಿಲ್ಲಾಧಿಕಾರಿಗಳಿಗೆ ಗ್ರಾಮಸ್ಥರ ಮನವಿ

ಹರಿಹರ, ಏ.3 - ಸರ್ಕಾರ ಯುಗಾದಿ ಹಬ್ಬವನ್ನು ಧಾರ್ಮಿಕ ಮತ್ತು ರೈತರ ದಿನವಾಗಿ ಆದೇಶ ಮಾಡಿದ್ದರಿಂದ, ಶ್ರೀ ಹರಿಹರೇಶ್ವರ ದೇವಾಲಯದಲ್ಲಿ ದೇವರಿಗೆ ವಿಶೇಷ ಪೂಜೆ ಮತ್ತು ರೈತರ ಎತ್ತುಗಳಿಗೆ ವಿಶೇಷ ಪೂಜೆ ಮಾಡಿ ಬಿತ್ತನೆ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಇದರಿಂದಾಗಿ ರೈತರ ಬದುಕು ಉತ್ತಮವಾಗಿ ಸಾಗಲಿ ಎಂದು ಹಾರೈಸುವೆ ಎಂದು ದಾವಣಗೆರೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ಜಿಲ್ಲಾಧಿಕಾರಿ ಬೀಳಗಿ ಅವರು ಶ್ರೀ ಹರಿಹರೇಶ್ವರ ದೇವಸ್ಥಾನದಲ್ಲಿ ದಂಪತಿ ಸಮೇತವಾಗಿ ವಿಶೇಷ ಪೂಜೆ ಮತ್ತು ಅಮರಾವತಿ ಗ್ರಾಮದ ರೈತಾಪಿ ವರ್ಗದವರು ಜಮೀನಿನಲ್ಲಿ ಶೃಂಗಾರ ಮಾಡಿದ ಎತ್ತುಗಳನ್ನು ಪೂಜಿಸಿ ರಂಟೆಯನ್ನು ಹೊಡೆದು ಬಿತ್ತನೆ ಕಾರ್ಯಕ್ಕೆ ಚಾಲನೆ ನೀಡಿದರು.



ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸರ್ಕಾರ ರೈತರ ಬದುಕು ಚೆನ್ನಾಗಿ ಇರಬೇಕು ಎಂದು ಅನೇಕ ಯೋಜನೆಗಳ ಜಾರಿಗೆ ತಂದಿದ್ದು, ಯುಗಾದಿ ಹಬ್ಬದ (5ನೇ ಪುಟಕ್ಕೆ)

# ಪತ್ರಿಕೆಗಳು ದರ ಹೆಚ್ಚಿಸಿ ವಿತರಕರಿಗೆ ಹೆಚ್ಚು ಕಮೀಷನ್ ನೀಡಲಿ

## ಪತ್ರಿಕಾ ವಿತರಕರ ಸಮಾವೇಶ ಹಾಗೂ ಕಾರ್ಯಕಾರಿಣಿ ಸಭೆಯ ಉದ್ಘಾಟನಾ ಸಮಾರಂಭದಲ್ಲಿ ಸಂಸದ ಸಿದ್ದೇಶ್ವರ ಸಲಹೆ

ದಾವಣಗೆರೆ, ಏ.3- ಪತ್ರಿಕೆಗಳು ದರ ಹೆಚ್ಚಿಸಿ, ಪತ್ರಿಕಾ ವಿತರಕರಿಗೆ ಹೆಚ್ಚು ಕಮಿಷನ್ ನೀಡುವಂತಾಗಲಿ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ ಭಾನುವಾರ ನಗರದ ಐಟಿಐ ಕಾಲೇಜು ಆವರಣದಲ್ಲಿನ ಶ್ರೀ ಚೌಡೇಶ್ವರಿ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ವಿತರಕ ಸಮಾವೇಶ ಹಾಗೂ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ದಿನಗಳಲ್ಲಿ ಒಂದು ಕಾಫಿಗೆ 10 ರೂ. ಇದೆ. ಆದರೆ ಪತ್ರಿಕೆಗಳ ನಡುವೆ ಹೆಚ್ಚಾಗಿರುವ ಸ್ಪರ್ಧೆಗಳಿಂದಾಗಿ ಕಳೆದ ಕೆಲ ವರ್ಷಗಳಿಂದ ಪತ್ರಿಕೆಗಳ ಬೆಲೆ ಹೆಚ್ಚಾಗಿಲ್ಲ. ಹಲವಾರು ಪತ್ರಿಕೆಗಳ ಬೆಲೆ ಕೇವಲ 5 ರೂ. ಮಾತ್ರ ಇದೆ. ಇದರಿಂದ ವಿತರಕರಿಗೆ ಕಮೀಷನ್ ಹೆಚ್ಚಿಸಲು ಸಾಧ್ಯವಾಗಿಲ್ಲ ಎಂದರು.

ಪತ್ರಿಕೆಗಳಿಗೆ ವಿತರಕರೇ ಬೆನ್ನೆಲುಬು. ವಿತರಣೆಯಾಗದಿದ್ದರೆ ಪ್ರಕಟಗೊಂಡ ಪತ್ರಿಕೆಗಳು ಜನರಿಗೆ ತಲುಪದೇ ಕಚೇರಿಯಲ್ಲಿಯೇ ಇರಬೇಕಾಗುತ್ತದೆ. ಹಿಂದೆ ಸೈಕಲ್‌ಗಳಲ್ಲಿ ಪತ್ರಿಕೆ ವಿತರಿಸಲಾಗುತ್ತಿತ್ತು. ಇಂದು ದ್ವಿ ಚಕ್ರ ವಾಹನಗಳಲ್ಲಿ ವಿತರಣಾ ಕಾರ್ಯ ನಡೆಯುತ್ತಿದೆ. ಕಡಿಮೆ ಕಮೀಷನ್‌ನಿಂದ ವಿತರಕರ ಬದುಕು ಕಷ್ಟವಾಗುತ್ತಿದೆ. ಆದ್ದರಿಂದ ಪತ್ರಿಕೆಗಳು ತಮ್ಮ ಬೆಲೆ ಹೆಚ್ಚಿಸಿಕೊಂಡು ವಿತರಕರ ಕಮೀಷನ್ ಹೆಚ್ಚಿಸಬೇಕಿದೆ ಎಂದರು.

ಈಗಾಗಲೇ ವಿತರಕರನ್ನು ಅಸಂಘಟಿತ ಕಾರ್ಮಿಕರ ಪಟ್ಟಿಗೆ ಸೇರಿಸಲಾಗಿದೆಯಾದರೂ, ಅದರಿಂದಾಗಿ ಹೆಚ್ಚು ಪ್ರಯೋಜನವಾಗಿಲ್ಲ ಎಂಬ ಆಪಾದನೆಗಳಿವೆ. ಕಾರ್ಮಿಕ ಸಚಿವರು ಹಾಗೂ ಸರ್ಕಾರದ ಮಟ್ಟದಲ್ಲಿ ಮಾತನಾಡಿ ಸಾಧ್ಯವಾದಷ್ಟೂ ಸಹಾಯ ಮಾಡುತ್ತೇನೆ ಎಂದು ಭರವಸೆ ನೀಡಿದರು. ವಿತರಕರೂ ಸಹ ಸಂಘಟಿತರಾಗಿ ಸೌಲಭ್ಯಗಳಿಗೆ ರಾಜ್ಯಮಟ್ಟದಲ್ಲಿ ಒತ್ತಡ ತಂದಾಗ ಮುಖ್ಯಮಂತ್ರಿಗಳ ಕಣ್ಣು ತೆರೆಸಲು ಸಾಧ್ಯವಾಗುತ್ತದೆ ಎಂದು ಕಿವಿ ಮಾತು ಹೇಳಿದರು.



### ಬೇಡಿಕೆಗಳ ಈಡೇರಿಕೆಗೆ ಸತತ ಪ್ರಯತ್ನ ಅಗತ್ಯ: ವಿಕಾಸ್

ಸಾಮಾನ್ಯವಾಗಿ ಪತ್ರಿಕಾ ವಿತರಕರು ಬೆಳಿಗ್ಗೆ ಪತ್ರಿಕೆಗಳನ್ನು ಹಂಚಿ, ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ರಜೆಗಳೂ ಇಲ್ಲದೆ ತಮ್ಮ ಕಷ್ಟ-ಸುಖಗಳನ್ನು ಹಂಚಿಕೊಳ್ಳಲು ಅವಕಾಶಗಳು ಸಿಗದಿರುವ ಸಂದರ್ಭಗಳ ನಡುವೆಯೂ ಸಂಘಟಿತರಾಗಿ ಸಭೆ ನಡೆಸಿ ತಮ್ಮ ಅಹವಾಲುಗಳನ್ನು ಜನಪ್ರತಿನಿಧಿಗಳ ಬಳಿ ಹೇಳಿಕೊಂಡಿರುವುದು ಸಂತೋಷದ ವಿಚಾರ ಎಂದು 'ಜನತಾವಾಣಿ' ಪತ್ರಿಕೆ ಸಂಪಾದಕ ಎಂ.ಎಸ್. ವಿಕಾಸ್ ಹೇಳಿದರು.

ವಿತರಕರ ಬೇಡಿಕೆಗಳಲ್ಲಿ ಮುಖ್ಯವಾಗಿ ಬೆಳಗಿನ ಜಾವ ಪತ್ರಿಕೆ ವಿತರಣೆಗೆ ಹಾಗೂ ಒಂದೆಡೆ ಸೇರಿ ಚರ್ಚಿಸಲು ಸೂಕ್ತವಾದ ಸ್ಥಳದ ವ್ಯವಸ್ಥೆ ಬೇಕು ಎಂಬುದು. ಜನಪ್ರತಿನಿಧಿಗಳು ನಿಮ್ಮ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಅನುಕೂಲ ಮಾಡಿಕೊಡುವ ಭರವಸೆ ನೀಡಿದ್ದಾರೆ.


ಬೇಡಿಕೆಗಳು ಈಡೇರಬೇಕಾದರೆ ಒಮ್ಮೆ ಮಾತ್ರ ಮನವಿ ಸಲ್ಲಿಸಿದರೆ ಸಾಲದು. ಆಗಾಗ್ಗೆ ಪ್ರಯತ್ನಿಸುತ್ತಿರಬೇಕು ಎಂದು ಸಲಹೆ ನೀಡಿದ ಅವರು, ವಿತರಕರ ಒಳಿತಿಗಾಗಿ ಸಹಕಾರ ನೀಡಲು ಯಾವಾಗಲೂ ಸಿದ್ಧ ಎಂದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತನಾಡಿ, ಎಲ್ಲಾ ಕ್ಷೇತ್ರಗಳಲ್ಲೂ ಸಂಘಟನೆಗಳಿದ್ದವು. ವಿತರಕರೇಕೆ ಸಂಘ ಸ್ಥಾಪಿಸಿಲ್ಲ ಎಂದು ಯೋಚಿಸಿದ್ದೆ. ಇದೀಗ ನೀವೂ ಸಹ ಸಂಘಟಿತರಾಗಿರುವುದು ಸಂತೋಷದ ವಿಚಾರ ಎಂದರು.

ನಿಮಗೆ ಬೇಕಾದವರಿಗೆ ಬೇಗ ಪತ್ರಿಕೆ ಹಂಚುವುದು. ಬೇಡವಾದವರ ಮನೆಗೆ ತಡವಾಗಿ ಪತ್ರಿಕೆ ತಲುಪಿಸುವ ಕೆಲಸ ಮಾಡದೆ. ಉತ್ತಮ ರೀತಿಯಿಂದ ಕೆಲಸ ಮಾಡಿ. ಸೌಲಭ್ಯಗಳಿಗಾಗಿ ಸಂಘಟಿತರಾಗಿ ಹೋರಾಟ ನಡೆಸಿ. ನಿಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ ನನ್ನಿಂದಾದ ಸಹಾಯ ಮಾಡುತ್ತೇನೆ ಎಂದರು.

ಪಾಲಿಕೆ ಮಾಜಿ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಪತ್ರಿಕಾ ವಿತರಕರ ವೃತ್ತಿ ಶ್ರೇಷ್ಠ ವೃತ್ತಿ. ಸಮಾಜ ತಿದ್ದುವ ಕೆಲಸದಲ್ಲಿ ತಮ್ಮ ಪಾಲೂ ಇದೆ. ಪತ್ರಿಕೆಗಳು ಹಾಗೂ ಓದುಗರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುವ ನಿಮ್ಮಲ್ಲಿ ವೃತ್ತಿ ಬಗ್ಗೆ (2ನೇ ಪುಟಕ್ಕೆ)

## ಬಿಜೆಪಿಗೆ ಸೇರುವುದಾಗಿ ಹೊರಟ್ಟಿ ಘೋಷಣೆ



ಹುಬ್ಬಳ್ಳಿ, ಏ. 3 – ಬಿಜೆಪಿಯನ್ನು ಸೇರುವುದಾಗಿ ಹೇಳಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಂದಿನ ಪರಿಷತ್ ಚುನಾವಣೆಯಲ್ಲಿ ಅಭ್ಯರ್ಥಿಯಾಗುವುದಾಗಿ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬಿಜೆಪಿ ಸೇರಲು ಆ ಪಕ್ಷದ ನಾಯಕರು ಆಹ್ವಾನಿಸಿದ್ದರು. ಅದಕ್ಕೆ ಒಪ್ಪಿಕೊಂಡಿದ್ದೇನೆ. ನನಗಾಗಿಯೇ ಬಿಜೆಪಿ ಇನ್ನೂ ಪಶ್ಚಿಮ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯನ್ನು ಪ್ರಕಟಿಸಿಲ್ಲ ಎಂದಿದ್ದಾರೆ.

ಈ ನಿರ್ಧಾರಕ್ಕೆ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಸಹ ಯಾವುದೇ ಆಕ್ಷೇಪ ಹೊಂದಿಲ್ಲ ಎಂದವರು ಹೇಳಿದ್ದಾರೆ. (2ನೇ ಪುಟಕ್ಕೆ)


**St. Mary's Convent English Medium**
Vinobanagara, Davanagere.
Mo: 94497 02778, 94819 09493

**WANTED**

Experienced and dedicated Teaching staff with fluency in English

| | | |
|---|---|---|
| 1. | English - B.A. M.A | 3 Posts |
| 2. | Hindi - B.A. B.Ed | 2 Posts |
| 3. | Maths - B.Sc. M.Sc | 2 Posts |
| 4. | Social Science - B.A.B.Ed | 2 Posts |
| 5. | Science - P.C.M. B.Sc. B.Ed | 2 Posts |

**Admissions Open**

From L.K.G. to 2nd PUC (Commerce) For the Academic Year 2022-23

# ಹರಿಹರದಲ್ಲಿ 7-8 ರಂದು ಅದ್ದೂರಿ ತುಂಗಾರತಿ



**ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ**

ಹರಿಹರ,ಏ.3- ಕೋಡಿಯಾಲ ಹೊಸಪೇಟೆ ಗ್ರಾಮದ ತುಂಗಭದ್ರಾ ನದಿ ದಂಡೆಯ ಮೇಲಿರುವ ತಪೋಕ್ಷೇತ್ರ ಪುಣ್ಯಕೋಟಿ ಮಠದ ಆವರಣದಲ್ಲಿ ಗಂಗಾರತಿ ಮಾದರಿಯಲ್ಲಿ ಇದೇ ದಿನಾಂಕ 7-8 ರಂದು 3 ನೇ ವರ್ಷದ ತುಂಗಾರತಿ ಕಾರ್ಯಕ್ರಮ ಶ್ರೀ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಅದ್ದೂರಿಯಾಗಿ ಜರುಗಲಿದೆ ಎಂದು ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ ತಿಳಿಸಿದರು.

ಪುಣ್ಯಕೋಟಿ ಮಠದ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ದಿನಾಂಕ 7 ರ ಗುರುವಾರ ಸಂಜೆ 4 ಗಂಟೆಗೆ ಹರಿಹರ ನಗರದ ಶ್ರೀ ಹರಿಹರೇಶ್ವರ ದೇವಾಲಯದಿಂದ ರಂಭಾಪುರಿ ಜಗದ್ಗುರು ಡಾ. ಶ್ರೀ ವೀರಸೋಮೇಶ್ವರ ಶ್ರೀಗಳನ್ನು ಸಾರೋಟಿನಲ್ಲಿ 1008 ಜನ ಮುತ್ತೈದೆಯರ ಪೂರ್ಣಕುಂಭ ಮತ್ತು ಸಕಲ ಕಲಾತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುಣ್ಯಕೋಟಿ ಮಠದ ಆವರಣದಲ್ಲಿ ತುಂಗಾರತಿ ಮಂಟಪಕ್ಕೆ ಕರೆ ತರಲಾಗುವುದು ಎಂದು ಹೇಳಿದರು.

ದಿನಾಂಕ 8 ರಂದು ಶುಕ್ರವಾರ ಸಂಜೆ 4 ಗಂಟೆಗೆ ತುಂಗಾರತಿ ಧಾರ್ಮಿಕ ಸಭೆ ನಡೆಯಲಿದೆ. ಸಾನ್ನಿಧ್ಯವನ್ನು ರಂಭಾಪುರಿ ಜಗದ್ಗುರುಗಳು ವಹಿಸಲಿದ್ದಾರೆ. ವಿಶ್ವಮಾತಾ ಪುಣ್ಯಕೋಟಿ ಪ್ರಶಸ್ತಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಪ್ರದಾನ ಮಾಡಲಾಗುವುದು.

ಸಮ್ಮುಖ ಹೊಸದುರ್ಗ ಕುಂಚಿಟಿಗ ಮಹಾಸಂಸ್ಥಾನ ಮಠದ ಶ್ರೀ ಡಾ ಶಾಂತವೀರ ಮಹಾಸ್ವಾಮೀಜಿ, ನೇತೃತ್ವ ಸೊಲ್ಲಾಪುರದ ಗೌಡಗಾಂವ್‌ನ ಸಂಸದ ಡಾ.ಜಯಸಿದ್ದೇಶ್ವರ ಮಹಾಸ್ವಾಮೀಜಿ ವಹಿಸಲಿದ್ದಾರೆ. ಉಪದೇಶಾಮೃತ ಮುಕ್ತಿಮಂದಿರದ ಶ್ರೀ ವಿಮಲ ರೇಣುಕಾ ವೀರ ಮುಕ್ತಿಮುನಿ ಮಹಾಸ್ವಾಮಿಗಳಿಂದ ನಡೆಯಲಿದೆ. ಪುಣ್ಯಕೋಟಿ ಜ್ಞಾನ ಭಂಡಾರ ಪ್ರಶಸ್ತಿಯನ್ನು ಅಥಣಿ ಮೂಟಗಿಮಠದ ಶ್ರೀ ಪ್ರಭು ಚೆನ್ನಬಸವ ಸ್ವಾಮೀಜಿಗೆ ಪ್ರಧಾನ ಮಾಡಲಾಗುವುದು.

ತುಂಗಾರತಿ ಉದ್ಘಾಟನೆಯನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ. ವೈ ವಿಜಯೇಂದ್ರ ನಡೆಸಿಕೊಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಅರುಣ್ ಕುಮಾರ್ ಪೂಜಾರ್, ಪುಣ್ಯಕೋಟಿ ಕ್ಯಾಲೆಂಡರ್ ಬಿಡುಗಡೆಯನ್ನು ರಾಜ್ಯ ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್ ನಡೆಸಿಕೊಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಕ್ಕಿ ಆಲೂರು ಶ್ರೀ ಚಂದ್ರಶೇಖರ್ ಸ್ವಾಮೀಜಿ, ಮಣಕವಾಡದ ಶ್ರೀ ಅಭಿನವ ಮೃತ್ಯುಂಜಯ ಸ್ವಾಮೀಜಿ, ರಾಜ್ಯ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್, ತೋಟಗಾರಿಕೆ ಸಚಿವ ಮುನಿರತ್ನ, ಸಿಎಂ. ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಆಹ್ಮದ್, ರಾಜ್ಯ ಯುವ ಜನತಾದಳ ಅಧ್ಯಕ್ಷ ನಿಖಿಲ್ ಕುಮಾರ್ ಸ್ವಾಮಿ, ಆಚಾರ್ಯ ವ ಮಹಾಚಾರ್ಯ ಸೇವಾ ವಿಭೂಷಣ, ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಭಾಗವಹಿಸಲಿದ್ದಾರೆ.

ಸಂಗೀತಯುಕ್ತ ತುಂಗಾರತಿಯ ನೇತೃತ್ವ ರಾಣೇಬೆನ್ನೂರು ಹಿರೇಮಠದ ಶ್ರೀ ಶಿವಯೋಗಿ ಸ್ವಾಮೀಜಿ ವಹಿಸಲಿದ್ದಾರೆ. ಸಮಾರಂಭದಲ್ಲಿ ಚೆನ್ನಬಸವ ಶ್ರೀಗಳು, ವೀರಭದ್ರ ಶ್ರೀಗಳು, ಗುರುಲಿಂಗ ಶ್ರೀಗಳು, ಬಸವಪ್ರಭು ಶ್ರೀಗಳು, ಮಹೇಶ್ವರ ಶ್ರೀಗಳು, ವೃಷಭಲಿಂಗ ಶ್ರೀಗಳು, ಪ್ರಭು ಶಾಂತಲಿಂಗ ಶ್ರೀಗಳು, ಶಾಂತವೀರ ಶ್ರೀಗಳು, ಚನ್ನಬಸವದೇವರು ಉಪಸ್ಥಿತರಿರಲಿದ್ದಾರೆ.

ಅತಿಥಿಗಳಾಗಿ ಸಂಸದ ಶಿವಕುಮಾರ ಉದಾಸಿ, ಶಾಸಕರಾದ ಎಸ್. ರಾಮಪ್ಪ, ಶ್ರೀನಿವಾಸ ಮಾನೆ, ಲಕ್ಷ್ಮಿ ಹೆಬ್ಬಾಳಕರ್, ವಿಧಾನ ಪರಿಷತ್ ಸದಸ್ಯರಾದ ಆರ್.ಶಂಕರ್ , ನಾಗರಾಜ್ ಛಬ್ಬಿ, ಎಸ್.ವಿ. ಸಂಕನೂರು, ಪ್ರದೀಪ್ ಶೆಟ್ಟರ್, ಮಾಜಿ ಸಚಿವರಾದ ಹೆಚ್. ಆಂಜನೇಯ, ರುದ್ರಪ್ಪ ಲಮಾಣಿ, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ. ಪಿ. ಹರೀಶ್, ಸೋಮಣ್ಣ ಬೇವಿನಮರದ, ರಾಣೇಬೆನ್ನೂರಿನ ಪ್ರಕಾಶ್ ಕೋಳಿವಾಡ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ, ಜಿ.ಪಂ. ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ್.

ಸಂತೋಭಟ್, ಸಂಜಯ್ ಶೆಟ್ಟಣ್ಣ, ಮಹಾಂತೇಶ್ ಬೀಳಗಿ, ಹನುಮಂತರಾಯ, ಸಿ.ಬಿ. ರಿಷ್ಯಂತ್, ಮಲ್ಲಿಕಾರ್ಜುನ ಗುಂಗೆ, ಅಜಯಗುಪ್ತ ಅವರು ಗೌರವ ಶ್ರೀರಕ್ಷೆ ಪಡೆಯಲಿದ್ದಾರೆ.

ತಪೋವನ ಆಯುರ್ವೇದ ಕಾಲೇಜಿನ ಡಾ. ಶಶಿಕುಮಾರ್ ಮೆಹರ್ವಾಡೆ ಗೌರವ ಸನ್ಮಾನ ಪಡೆಯಲಿದ್ದಾರೆ. ಕೋಡಿಯಾಲ ಹೊಸಪೇಟೆ ಗ್ರಾಮ ಪಂಚಾಯತಿ ಅಧ್ಯಕ್ಷ ಚೇತನ್ ಮಂಜಣ್ಣ ಪೂಜಾರ್ ಇತರರು ಭಾಗವಹಿಸಲಿದ್ದಾರೆ.

ಗ್ರಾಮ ಪಂಚಾಯತಿ ಸದಸ್ಯ ದಿನೇಶ್ ಹಳ್ಳೆಳ್ಳಪ್ಪನವರ್, ಮಾಜಿ ಸದಸ್ಯ ಕರಿಯಪ್ಪ ಮಾಳಗಿ ಮತ್ತು ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಲಿಂ. ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿ ವಾಲ್ಮೀಕಿ ಗುರುಪೀಠ ಕಟ್ಟಿ ಬೆಳೆಸಿದ ಮಹಾ ತಪಸ್ವಿ



**ಹರಪನಹಳ್ಳಿ ಕಾರ್ಯಕ್ರಮದಲ್ಲಿ ಕೆಪಿಎಸ್‌ಸಿ ಮಾಜಿ ಸದಸ್ಯ ಜಿ.ಟಿ. ಚಂದ್ರಶೇಖರಪ್ಪ ಶ್ಲಾಘನೆ**

ಹರಪನಹಳ್ಳಿ, ಏ.3- ಲಿಂ. ಶ್ರೀ ಪುಣ್ಯಾನಂದ ಪುರಿ ಮಹಾ ಸ್ವಾಮೀಜಿಯವರು ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠವನ್ನು ಕಟ್ಟಿ ಬೆಳೆಸಿ, ರಾಜ್ಯದ ವಾಲ್ಮೀಕಿ ನಾಯಕ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಮಹಾ ತಪಸ್ವಿ ಎಂದು ಕರ್ನಾಟಕ ಲೋಕ ಸೇವಾ ಆಯೋಗದ ಮಾಜಿ ಸದಸ್ಯ ಜಿ.ಟಿ. ಚಂದ್ರಶೇಖರಪ್ಪ ಶ್ಲಾಘಿಸಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ಇಂದು ಆಯೋಜಿಸಿದ್ದ ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದ ಪ್ರಥಮ ಪೀಠಾಧಿಪತಿ ಲಿಂ. ಪರಮಪೂಜ್ಯ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮೀಜಿಯವರ 15 ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹಿಂದುಳಿದ ವಾಲ್ಮೀಕಿ ನಾಯಕ ಸಮಾಜವನ್ನು ಮುಖ್ಯ ವಾಹಿನಿಗೆ ತರಲು ರಾಜ್ಯ ಪ್ರವಾಸ ಮಾಡಿ ಸಮಾಜದಲ್ಲಿ ಜಾಗೃತಿ ಮಾಡಲು ಶ್ರಮಿಸಿದ್ದರು. ಈಗ ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿಯವರು ವಾಲ್ಮೀಕಿ ನಾಯಕ ಸಮುದಾಯಕ್ಕೆ ಶೇ. 7.5 ಮೀಸಲಾತಿ ಹೆಚ್ಚಳ ಸೇರಿದಂತೆ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೈಗೊಂಡಿರುವ ಧರಣಿ ಸತ್ಯಾಗ್ರಹ 53 ದಿನಗಳು ಕಳೆದರೂ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೀಸಲಾತಿಗೆ ಸಂಬಂಧಿಸಿದಂತೆ ಯಾವುದೇ ಸೂಕ್ತ ಕ್ರಮ ತೆಗೆದುಕೊಳ್ಳದೆ ತಾರತಮ್ಯ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತ ಪಡಿಸಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚಂಗೆಪ್ಪ, ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷ ಆಲದಹಳ್ಳಿ ಷಣ್ಮುಖಪ್ಪ ಮಾತನಾಡಿ, ಎಸ್ಟಿ ಮೀಸಲಾತಿ ಹೆಚ್ಚಳ ಸಂವಿಧಾನಿಕ ಹಕ್ಕಾಗಿದ್ದು ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿ ಬಂದ ತಕ್ಷಣ ಮೀಸಲಾತಿ ಹೆಚ್ಚಳ ಮಾಡುತ್ತೇವೆ ಎಂದು ನಮ್ಮನ್ನು ನಂಬಿಸಿ, ಯಡಿಯೂರಪ್ಪ ಕೈಕೊಟ್ಟರು. ಈಗಿನ ಸರ್ಕಾರ ಆ ವರದಿಯನ್ನು ಸುಭಾಷ್ ಆಡಿ ನೇತೃತ್ವದ ಉಪಸಮಿತಿಗೆ ನೀಡಿ ಕಾಲಹರಣ ಮಾಡುತ್ತಿದೆ. ರಾಜ್ಯದಲ್ಲಿ 4ನೇ ಅತಿ ದೊಡ್ಡ ಸಮಾಜವಾದ ವಾಲ್ಮೀಕಿ ನಾಯಕರ ಜನಸಂಖ್ಯೆ 50 ಲಕ್ಷ ಇದ್ದು, ಸರ್ಕಾರ ಶೇ.7.5 ಮೀಸಲಾತಿಯನ್ನು ನೀಡಲೇಬೇಕು ಇಲ್ಲವಾದರೆ ನಮ್ಮ ಸಮಾಜದ ಶಕ್ತಿಯನ್ನು ನಿಮಗೆ ತೋರಿಸುವ ಮೂಲಕ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದರು.

ಮಹರ್ಷಿ ವಾಲ್ಮೀಕಿ, ಮದಕರಿ ನಾಯಕ ಸೇರಿದಂತೆ ರಾಜ್ಯದ 77 ಪಾಳೇಗಾರರು ಸಮಾಜ ಕಟ್ಟುವಲ್ಲಿ ಶ್ರಮ ಪಟ್ಟಿದ್ದಾರೆ. ಪ್ರತಿ ರಾಜರ ಹಿಂದೆ ವಾಲ್ಮೀಕಿ ನಾಯಕರ, ಬೇಡರ ಶ್ರಮವಿದೆ. ಸಮಾಜದ ಮೀಸಲಾತಿಯಿಂದ ಚುನಾಯಿತರಾದ ವಾಲ್ಮೀಕಿ ನಾಯಕ ಸಮಾಜದ ಶಾಸಕರು, ಸಂಸದರು ಸಮುದಾಯಕ್ಕೆ ಸಿಗಬೇಕಾದ ಮೀಸಲಾತಿಗಾಗಿ ಹೋರಾಟಕ್ಕೆ ಇಳಿಯಬೇಕು. ಹಾಗಾದರೆ ಮೀಸಲಾತಿ ಸಿಕ್ಕೇ ಸಿಗುತ್ತದೆ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷರುಗಳಾದ ನಿಚ್ಚವನಹಳ್ಳಿ ಕೆ. ಪರಶುರಾಮಪ್ಪ, ಶಿರಹಟ್ಟಿ ದಂಡ್ಯಪ್ಪ, ಸಂಘಟನಾ ಕಾರ್ಯದರ್ಶಿಗಳಾದ ಜಿ.ಕೆ. ಬಸವರಾಜ್, ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಘಟಕದ ಗೌರವ ಅಧ್ಯಕ್ಷರಾದ ಟಿ.ಪದ್ಮಾವತಿ, ಸದಸ್ಯರಾದ ಕೆ. ದ್ರಾಕ್ಷಾಯಣಮ್ಮ, ಮಂಜುಳಾ, ಪವಿತ್ರ, ವಕೀಲರಾದ ಜಿಟ್ಟಿನಕಟ್ಟಿ ಮಂಜುನಾಥ್, ಉಪನ್ಯಾಸಕರುಗಳಾದ ಕೊಟ್ರೇಶ್, ರವಿಕುಮಾರ್ ಸೇರಿದಂತೆ ಇತರರು ಇದ್ದರು.

## ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ

**(1ನೇ ಪುಟದಿಂದ)** ಕೊಡುವ ತಾಕತ್ತು ರೈತರಿಗೆ ಮಾತ್ರ ಇದ್ದು, ಯಾವುದೇ ಉದ್ಯಮಿಗಳಿಗಿಲ್ಲ. ಆದರೆ ದೇಶದಲ್ಲಿ ಕೃಷಿ ಅಭಿವೃದ್ಧಿಯಾಗುತ್ತಿದೆಯೇ ಹೊರತು, ಕೃಷಿಕರು ಅಭಿವೃದ್ಧಿ ಹೊಂದುತ್ತಿಲ್ಲ. ಕೃಷಿಯಲ್ಲಿ ಬದಲಾವಣೆ ತರದೇ ಕೃಷಿಕರು ಅಭಿವೃದ್ಧಿಯಾಗಲು ಅಸಾಧ್ಯ. ರೈತರು ಕೃಷಿಯಲ್ಲಿ ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಪ್ರಗತಿ ಹೊಂದುವಂತಾಗಬೇಕು. ಸಮಗ್ರ ಕೃಷಿಗೆ ಹೆಚ್ಚಿನ ಒತ್ತು ನೀಡಬೇಕು. ರೈತರು ತಾವು ಬೆಳೆದ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡಿದಲ್ಲಿ ಅಧಿಕ ಲಾಭ ಹೊಂದಿ, ಆದಾಯ ದ್ವಿಗುಣಗೊಳ್ಳಲು ಸಾಧ್ಯ. ಪ್ರಧಾನಿ ಮೋದಿ ಅವರು ಆತ್ಮನಿರ್ಭರ್ ಯೋಜನೆಯಡಿ ಸಣ್ಣಪುಟ್ಟ ಕೈಗಾರಿಕೆಗಳಿಗೆ ಸಬ್ಸಿಡಿ ರೂಪದಲ್ಲಿ ಸಾಲಸೌಲಭ್ಯ ಯೋಜನೆ ಜಾರಿಗೆ ತಂದಿದ್ದಾರೆ. ರಾಜ್ಯ ಸರ್ಕಾರ ಎಲ್ಲಾ ರೈತರ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ನೆರವು ನೀಡಿದೆ. ರೈತರಿಗೆ ಸಬ್ಸಿಡಿ ರೂಪದಲ್ಲಿ ಡೀಸೆಲ್ ಪೂರೈಕೆ ಮಾಡುತ್ತಿದೆ ಎಂದರು.

ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ.ಬಣಕಾರ, ಶಾಸಕ ಅರುಣಕುಮಾರ ಪೂಜಾರ, ವಿಧಾನ ಪರಿಷತ್ ಸದಸ್ಯ ಆರ್.ಶಂಕರ್, ಕೆಪಿಸಿಸಿ ಸದಸ್ಯ ಪ್ರಕಾಶ ಕೋಳಿವಾಡ ಮಾತನಾಡಿದರು. ಶ್ರೀ ಬಸವೇಶ್ವರ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಹಾಲನಗೌಡ ಮುಂದಿನಮನಿ ಅಧ್ಯಕ್ಷತೆ ವಹಿಸಿದ್ದರು.

ಸಾಧು ವೀರಶೈವ ಸಮಾಜ ಅಧ್ಯಕ್ಷ ಶಿವಣ್ಣ ನಂದಿಹಳ್ಳಿ, ರಟ್ಟಿಹಳ್ಳಿ ಸಾಧು ವೀರಶೈವ ಸಮಾಜದ ಅಧ್ಯಕ್ಷ ಮಾಲತೇಶ ಗಂಗೋಳ, ಗುತ್ತಿಗೆದಾರ ರುದ್ರಗೌಡ್ರ ಗಂಗೋಳ, ಮಂಜನಗೌಡ ಪಾಟೀಲ, ಪಂಚಾಯತ್ ರಾಜ್ ಇಲಾಖೆ ಅಧಿಕಾರಿ ವಿಜಯಕುಮಾರ ಚೌಡಣ್ಣನವರ, ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡ ಶಿವಣ್ಣನವರ, ಈರಣ್ಣ ಮಾಕನೂರ, ರಾಯಣ್ಣ ಮಾಕನೂರ, ಸಿದ್ದನಗೌಡ ಮುದಿಗೌಡ್ರ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ಪಂಜಾಬ್‌ಗೆ ಹರಿಯಾಣ ಸೆಡ್ಡು

**(1ನೇ ಪುಟದಿಂದ)** ಮೂಲ್ ಚಂದ್ ಶರ್ಮ ತಿಳಿಸಿದ್ದಾರೆ. ಹಲವಾರು ವಿಷಯಗಳನ್ನು ಅಂದು ಪರಿಗಣಿಸಲಾಗುವುದು. ಪಂಜಾಬ್‌ನಲ್ಲಿ ತೆಗೆದುಕೊಳ್ಳಲಾದ ನಿರ್ಣಯದ ನಂತರ ಈ ನಿರ್ಧಾರಕ್ಕೆ ಬರಲಾಗಿದೆ ಎಂದವರು ಹೇಳಿದ್ದಾರೆ. ಚಂಡೀಘಡ ಕೇಂದ್ರಾಡಳಿತ ಪ್ರದೇಶವಾಗಿದ್ದು, ಇದು ಪಂಜಾಬ್ ಹಾಗೂ ಹರಿಯಾಣ ಎರಡರ ರಾಜಧಾನಿಯಾಗಿದೆ. ಅಲ್ಲದೇ, ಪಂಜಾಬ್ ಮತ್ತು ಹರಿಯಾಣ ನಡುವೆ ಸಟ್ಲಜ್ - ಯಮುನಾ ಸಂಪರ್ಕ ಕಾಲುವೆಯ ವಿವಾದವೂ ಇದೆ.

# ವೀರ ಯೋಧರನ್ನು ಸನ್ಮಾನಿಸುವುದು ಶ್ರೇಷ್ಠ ಕಾರ್ಯ

## ಜಗಳೂರಿನ ಕಾರ್ಯಕ್ರಮದಲ್ಲಿ ಜಿಲ್ಲಾ ಲಯನ್ಸ್ ರಾಜ್ಯಪಾಲ ವಿಶ್ವನಾಥ ಶೆಟ್ಟಿ ಮೆಚ್ಚುಗೆ



ಜಗಳೂರು, ಏ.3- ವೀರ ಯೋಧರು ತಮ್ಮ ಕುಟುಂಬ ಬಿಟ್ಟು, ಗಡಿಯಲ್ಲಿ ದೇಶದ ರಕ್ಷಣೆ ಮಾಡುವುದರಿಂದ ನಾವು ನೆಮ್ಮದಿಯಾಗಿರಲು ಸಾಧ್ಯವಾಗಿದೆ. ಇಂತಹ ನಿವೃತ್ತ ಯೋಧರನ್ನು ಸನ್ಮಾನಿಸುತ್ತಿರುವುದು ಶ್ರೇಷ್ಠ ಕೆಲಸ ಎಂದು ಲಯನ್ಸ್ ಜಿಲ್ಲಾ ರಾಜ್ಯಪಾಲರಾದ ವಿಶ್ವನಾಥಶೆಟ್ಟಿ ತಿಳಿಸಿದರು.

ಪಟ್ಟಣದ ಜೆ.ಎಂ. ಇಮಾಮ್ ಶಾಲೆ ಆವರಣದಲ್ಲಿ ಲಯನ್ಸ್ ಕ್ಲಬ್ ಜಗಳೂರು, ಜಗಳೂರು ಅಮ್ಮ ಲಯನ್ಸ್ ಕ್ಲಬ್ ಇವರ ಆಶ್ರಯದಲ್ಲಿ ಲಯನ್ಸ್ ಜಿಲ್ಲಾ ರಾಜ್ಯಪಾಲರ ಅಧಿಕೃತ ಭೇಟಿಯ ನಿಮಿತ್ತ ಸೇವಾ ಕಾರ್ಯದ ಅಂಗವಾಗಿ ನಿವೃತ್ತ ಯೋಧರನ್ನು ಸನ್ಮಾನಿಸುವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

27 ಜನ ನಿವೃತ್ತ ಯೋಧರನ್ನು ಸನ್ಮಾನಿಸುವ ಮೂಲಕ ಜಗಳೂರು ಲಯನ್ಸ್ ಕ್ಲಬ್ ಜಿಲ್ಲೆಯಲ್ಲಿ ಯಾವುದೇ ಕ್ಲಬ್ ಮಾಡದ ವಿಶಿಷ್ಟವಾದ ಸೇವಾ ಕಾರ್ಯ ಮಾಡಿದೆ ಎಂದು ಶ್ಲಾಘಿಸಿದರು.

ನಿವೃತ್ತ ಯೋಧರನ್ನು ಹಾಗೂ ವೀರ ಮಹಿಳೆಯರನ್ನು ಸನ್ಮಾನಿಸುವುದು ಅತ್ಯಂತ ಶ್ರೇಷ್ಠವಾದ ಕೆಲಸ. ಇಂತಹ ಸೇವಾ ಕಾರ್ಯ ಸಂತೃಪ್ತಿ ನೀಡುತ್ತದೆ ಎಂದು ವಿಶ್ವನಾಥಶೆಟ್ಟಿ ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಲಯನ್ಸ್ ಕ್ಲಬ್ ಅಧ್ಯಕ್ಷ ಎನ್. ಟಿ.ಎರ್ರಿಸ್ವಾಮಿ ಅವರು, ಜಿಲ್ಲಾ ರಾಜ್ಯ ಪಾಲರ ಭೇಟಿ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನ ನಿವೃತ್ತಿ ಪಡೆದ ವೀರ ಯೋಧರನ್ನು ಗೌರವ ಪೂರ್ವಕವಾಗಿ ಸನ್ಮಾನಿಸುವುದು ಶ್ರೇಷ್ಠ ಸೇವಾ ಕಾರ್ಯವಾಗಿದೆ ಎಂದರು.

ಲಯನ್ಸ್ ಜಿಲ್ಲಾ ಕೋಶಾಧಿಕಾರಿ ಜಯಪ್ರಕಾಶ್ ಭಂಡಾರಿ, ಲಯನ್ಸ್ ವಲಯ ಅಧ್ಯಕ್ಷ ವೆಂಕಟಾಚಲಂ, ಚಿತ್ರದುರ್ಗ ಜಿಲ್ಲಾ ಲಯನ್ಸ್ ಕ್ಲಬ್ ಅಧ್ಯಕ್ಷ ಉದಯಶಂಕರ್, ರಾಜು ಕೋಟೇನ್, ಸಂಸ್ಥಾಪಕ ಅಧ್ಯಕ್ಷ ಹುಸೇನ್ ಮಿಯ್ಯಾ ಸಾಬ್ ಉಪಸ್ಥಿತರಿದ್ದರು.

ತಾಲ್ಲೂಕಿನ ನಿವೃತ್ತ ಯೋಧರಾದ ಪಿ.ಆರ್. ವೇಮಾರೆಡ್ಡಿ, ಸಿ.ದೇವರಾಜ್, ಬಿ. ತಿಪ್ಪೇಸ್ವಾಮಿ, ಎನ್. ತಿಪ್ಪಯ್ಯ, ಸತ್ಯನಾರಾಯಣ, ವಾಸುದೇವ ರೆಡ್ಡಿ, ಗೋವಿಂದ ರೆಡ್ಡಿ, ಹೆಚ್. ರೆಹಮಾನ್, ಡಿ.ಹೆಚ್.ದಾದಾಪೀರ್, ಮಹಮ್ಮದ್ ರಫೀಕ್ ಸೇರಿ 27 ಜನರಿಗೆ ನೆನಪಿನ ಕಾಣಿಕೆ ನೀಡಿ, ಗೌರವಿಸಲಾಯಿತು.

ಡಾ.ಅನಿರುದ್, ರಾಘವೇಂದ್ರ, ಸವಿತಾ ಪ್ರಕಾಶ್, ಕ್ಲಬ್‌ನ ವಾರ್ಷಿಕ ವರದಿ ಮಂಡಿಸಿದರು. ಶಾಹೀನಾ ಬೇಗಂ ಸ್ವಾಗತಿಸಿದರು.

## ಬಿಜೆಪಿಗೆ ಸೇರುವುದಾಗಿ ಹೊರಟ್ಟಿ ಘೋಷಣೆ

**(1ನೇ ಪುಟದಿಂದ)** ಶನಿವಾರ ಯಡಿಯೂರಪ್ಪ ಅವರು ನನ್ನ ಜೊತೆ ಮಾತನಾಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಎಲ್ಲ ನಾಯಕರು ನನ್ನ ಸೇರ್ಪಡೆಗೆ ಒಪ್ಪಿದ್ದಾರೆ. ಬಿಜೆಪಿ ಸೇರುವುದು ಬಹುತೇಕ ಅಂತಿಮವಾಗಿದೆ ಎಂದವರು ಹೇಳಿದ್ದಾರೆ.

1980ರಿಂದ ಸತತ ಏಳು ಬಾರಿ ಅವರು ವಿಧಾನಸಭಾ ಸದಸ್ಯರಾಗಿದ್ದಾರೆ. ಸುದೀರ್ಘ ಕಾಲದಿಂದ ಜೆಡಿಎಸ್ ಜೊತೆ ಹೊಂದಿದ್ದ ಸಂಬಂಧವನ್ನು ಹೊರಟ್ಟಿ ಕಡಿದುಕೊಂಡಿದ್ದಾರೆ.

## ಯುಗಾದಿ ಹಬ್ಬದಂದು ಉಳುಮೆ ಮಾಡಿದ ರೇಣುಕಾಚಾರ್ಯ



ಹೊನ್ನಾಳಿ,ಏ.3- ಯುಗಾದಿ ಹಬ್ಬದಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ತಾಲ್ಲೂಕಿನ ಕೋಟೆಮಲ್ಲೂರು ಗ್ರಾಮದಲ್ಲಿ ರೈತರ ಜಮೀನಿನಲ್ಲಿ ಉಳುಮೆ ಮಾಡುವ ಮೂಲಕ ಗಮನ ಸೆಳೆದರು.

ಕೋಟೆಮಲ್ಲೂರು ಗ್ರಾಮದ ಹಾಲೇಶಪ್ಪ ಗೌಡ್ರು ನೂತನ ಟ್ರ್ಯಾಕ್ಟರ್ ಖರೀದಿ ಮಾಡಿದ್ದು, ಅವರ ಜಮೀನಿನಲ್ಲಿ ಉಳುಮೆ ಮಾಡುವ ಮೂಲಕ ರೈತ ಬಾಂಧವರಿಗೆ ಹೊಸ ವರ್ಷದ ಶುಭಾಶಯ ಕೋರಿದರು.

ಯುಗಾದಿ ಹಬ್ಬ ಬಂದರೆ ಸಾಕು ರೈತರ ಕೃಷಿ ಚಟುವಟಿಕೆಗೆ ಜೀವ ಕಳೆ ಬಂದಂಗೆ ಎಂದ ರೇಣುಕಾಚಾರ್ಯ, ಯುಗಾದಿ ಹಬ್ಬ ರೈತರ ಬಾಳಲ್ಲಿ ಬಂಗಾರ ತರಲಿ ಎಂದು ಆಶಿಸಿದರು.

**ಲಗೋರಿ ಆಡಿದ ರೇಣುಕಾಚಾರ್ಯ:** ಯುಗಾದಿ ಹಬ್ಬದಂದು ಕೋಟೆ ಮಲ್ಲೂರು ಗ್ರಾಮಕ್ಕೆ ಭೇಟಿ ನೀಡಿದ್ದ ರೇಣುಕಾಚಾರ್ಯ ಗ್ರಾಮೀಣ ಕ್ರೀಡೆಯಾದ ಲಗೋರಿ, ಚೂಚೆಂಡು ಆಟವಾಡಿದರು.

ಯುಗಾದಿ ಹಬ್ಬದಂದು ಗ್ರಾಮೀಣ ಕ್ರೀಡೆಗಳನ್ನು ಆಡುವುದು ವಾಡಿಕೆ, ಆಧುನೀಕತೆ ಬೆಳೆದಂತೆ ಗ್ರಾಮೀಣ ಕ್ರೀಡೆಗಳು ನಶಿಸಿ ಹೋಗುತ್ತಿದ್ದು, ಯುವಕರು ಗ್ರಾಮೀಣ ಕ್ರೀಡೆಗಳ ಕಡೆ ಹೆಚ್ಚಿನ ಗಮನ ಕೊಡುವಂತೆ ರೇಣುಕಾಚಾರ್ಯ ಯುವಕರಲ್ಲಿ ಮನವಿ ಮಾಡಿದರು.


## ಪುಣ್ಯಸ್ಮರಣೆ



**ದಿ|| ಶ್ರೀಮತಿ ಬಿ.ಎಸ್. ಅನ್ನಪೂರ್ಣ**

(ದಿ|| ಬಿ. ಶಿವಮೂರ್ತಪ್ಪನವರ ಧರ್ಮಪತ್ನಿ)

ನೀವು ನಮ್ಮನ್ನು ಅಗಲಿ ಇಂದಿಗೆ ಆರು ವರ್ಷಗಳಾದವು, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ

**ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**



## ಕುಂಬಳೂರು ಗೌಡ್ರ ಕೆ. ಸರೋಜಮ್ಮ ನಿಧನ



ದಾವಣಗೆರೆ ವಿದ್ಯಾನಗರ ವಾಸಿ, ಕುಂಬಳೂರು ಗೌಡ್ರ ಜಿ.ಕೆ. ವಿಜಯ ಅವರ ಧರ್ಮಪತ್ನಿ ಕುಂಬಳೂರು ಗೌಡ್ರ ಕೆ.

**ಸರೋಜಮ್ಮ** (61)

ಅವರು ದಿನಾಂಕ 4.4.2022ರ ಸೋಮವಾರ ಬೆಳಗಿನ ಜಾವ 1 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4.4.2022ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ಹರಿಹರ ತಾಲ್ಲೂಕು ಕುಂಬಳೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**81974 54789, 88801 04979**


## ಹೆಚ್ಚು ಕಮೀಷನ್ ನೀಡಲಿ

**(1ನೇ ಪುಟದಿಂದ)** ಕೀಳರಿಮೆ ಸಲ್ಲದು ಎಂದರು. ನಗರದಲ್ಲಿನ ಶೇ.90ರಷ್ಟು ವಿತರಕರು ನನ್ನ ಸ್ನೇಹಿತರಿದ್ದಾರೆ. ಅವರ ಕಷ್ಟಗಳ ಅರಿವಿದೆ. ಪಾಲಿಕೆಯಲ್ಲಿ ಪತ್ರಕರ್ತರು ಹಾಗೂ ವಿತರಕರ ಕ್ಷೇಮಾಭಿವೃದ್ಧಿ ನಿಧಿಯಾಗಿ 10 ಲಕ್ಷ ಮೀಸಲಿಡಲಾಗಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಮಾತನಾಡಿ, ಕೊರೊನಾ ಸಮಯದಲ್ಲಿ ಪ್ರಾಣದ ಹಂಗು ತೊರೆದು ಪತ್ರಿಕೆ ವಿತರಿಸಿರುವ ನಿಮ್ಮ ಕಾರ್ಯ ಶ್ಲಾಘನೀಯ. ತಡವಾಗಿಯಾದರೂ ಸಂಘಟಿತರಾಗಿದ್ದೀರಿ. ಸಮಾವೇಶ ಹಾಗೂ ಹೋರಾಟಗಳಿಂದ ಸರ್ಕಾರದ ಕಣ್ಣು ತೆರೆಸಲು ಸಾಧ್ಯ ಎಂದು ಹೇಳಿದರು.

ಪತ್ರಕರ್ತ ವೀರಪ್ಪ ಎಂ.ಬಾವಿ ಮಾತನಾಡುತ್ತಾ, ವಿತರಕರು ಸಂಘಟಿತರಾಗಿರುವುದು ಸಂತಸದ ವಿಚಾರ. ಆದರೆ ಕೆಲ ವ್ಯಕ್ತಿಗಳು ಒಗ್ಗಟ್ಟು ಕೆಡಿಸಲು ಯತ್ನಿಸುತ್ತಾರೆ. ಅವರ ಮಾತಿಗೆ ಕಿವಿಗೊಡಬಾರದು. ಪ್ರಸ್ತುತ ಇರುವ ಸಂಘದಲ್ಲಿನ ಪದಾಧಿಕಾರಿಗಳು ಸಮರ್ಥರಿದ್ದಾರೆ ಎಂದರು.

ದಾವಣಗೆರೆ ನಗರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೆಚ್. ಚಂದ್ರು ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಶಂಭುಲಿಂಗ ಕೆ. ಪ್ರಾಸ್ತಾವಿಕವಾಗಿ ಮಾತನಾಡಿದರು. ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಉಪಸ್ಥಿತರಿದ್ದರು.


## ಹತ್ತನೇ ವರ್ಷದ ಪುಣ್ಯಸ್ಮರಣೆ



**ದಿ|| ಹಾಸಬಾವಿ ಕೊಟ್ರಬಸಪ್ಪನವರು**

*ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,*

ಪತ್ನಿ : **ಶ್ರೀಮತಿ ಹೆಚ್.ಕೆ. ಮಂಗಳ,**

ಅಕ್ಕಂದಿರು : **ನಂದಾ ದೇವಣಗಾವಿ**

ಮಕ್ಕಳು : **ಸಂಜಯ್, ಬಕ್ಕೇಶ್, ಸೌಮ್ಯ,**

ಮೊಮ್ಮಗಳು : **ಧೃತಿ ಹಾಗೂ ಬಂಧು-ಮಿತ್ರರು.**


# ದಾವಣಗೆರೆ-ಹರಿಹರ ಅರ್ಬನ್ ಸಹಕಾರಿಗೆ ಲಾಭ

**(1ನೇ ಪುಟದಿಂದ)** ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, 2021-22ನೇ ಸಾಲಿನಲ್ಲಿ ಆದಾಯ ತೆರಿಗೆ 1.74 ಕೋಟಿ ರೂ. ಮತ್ತು ಇತರೆ ಅವಕಾಶ 1.84 ಕೋಟಿ ರೂ. ಕಲ್ಪಿಸಿದ ನಂತರ 5.04 ಕೋಟಿ ರೂ. ನಿವ್ವಳ ಲಾಭ ಗಳಿಸಿದ್ದು, ಇದು ಕಳೆದ ಸಾಲಿಗೆ ಹೋಲಿಸಿದ್ದಲ್ಲಿ ಗಣನೀಯವಾಗಿ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ ಎಂದು ತಿಳಿಸಿದ್ದಾರೆ.

5.44 ಕೋಟಿ ರೂ. ಷೇರು ಬಂಡವಾಳ, 50.06 ಕೋಟಿ ರೂ. ಕಾಯ್ದಿಟ್ಟ ಮತ್ತು ಇತರೆ ನಿಧಿಗಳಾಗಿದ್ದು, 307.18 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದೆ. 250.19 ಕೋಟಿ ರೂ. ಸಾಲ ಮತ್ತು ಮುಂಗಡಗಳನ್ನು ನೀಡಲಾಗಿದೆ. ಬ್ಯಾಂಕಿನ ಅಳತೆಗೋಲಿನ ಎನ್.ಪಿ.ಎ ಆಗಿದ್ದು, ಇದನ್ನು ಕಡಿಮೆ ಮಾಡುವಲ್ಲಿ ಶ್ರಮ ವಹಿಸಿ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮಾಣದೊಳಗೆ ತರುವಲ್ಲಿ ತಮ್ಮ ಬ್ಯಾಂಕ್ ಯಶಸ್ವಿಯಾಗಿದೆ. ಬ್ಯಾಂಕಿನ ನಿವ್ವಳ ಎನ್.ಪಿ.ಎ ಶೇ. 2.16 ರಷ್ಟಿದೆ ಎಂದಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ನಿನ್ನೆ ಸಂಜೆ ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, ಬ್ಯಾಂಕಿನ ಗ್ರಾಹಕರ ಮತ್ತು ಸದಸ್ಯರ ಪ್ರೋತ್ಸಾಹ, ಕಾರ್ಯಕಾರಿ ಮಂಡಳಿ ಸದಸ್ಯರ ಸಲಹೆ - ಸಹಕಾರ, ಸಿಬ್ಬಂದಿ ವರ್ಗದವರ ಶ್ರಮದಿಂದಾಗಿ ಬ್ಯಾಂಕ್ ಈ ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ.

ಬ್ಯಾಂಕಿನ ಸದಸ್ಯರುಗಳು ಅಪಘಾತಕ್ಕೀಡಾದ ಸಂದರ್ಭದಲ್ಲಿ ಮೃತರ ವಾರಸುದಾರರಿಗೆ 1 ಲಕ್ಷ ರೂ. ಅಪಘಾತ ವಿಮೆ ಪರಿಹಾರ ಸಿಗುವಂತೆ ವಿಮೆ ಮಾಡಿಸಲಾಗಿದೆ. ಕೇವಲ ಮರಣ ಹೊಂದಿದವರಿಗೆ ಮಾತ್ರವಲ್ಲದೇ, ಅಂಗಾಂಗಗಳು ಭಾಗಶಃ ಶಾಶ್ವತ ಊನವಾದರೆ ಅಪಘಾತ ವಿಮೆ ದೊರೆಯಲಿದೆ. ಸದಸ್ಯರು ಮೃತಪಟ್ಟಲ್ಲಿ ಅವರ ಶವ ಸಂಸ್ಕಾರಕ್ಕೆ 10 ಸಾವಿರ ರೂ.ಗಳನ್ನು ಅವರ ವಾರಸುದಾರರಿಗೆ ನೀಡಲಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 172 ಸದಸ್ಯರಿಗೆ 17.15 ಲಕ್ಷ ರೂ. ನೀಡಲಾಗಿದೆ.

ಕರ್ನಾಟಕ ಸರ್ಕಾರವು ಯಶಸ್ವಿನಿ ವಿಮೆ ಯೋಜನೆಯನ್ನು ಮತ್ತೆ ಜಾರಿ ಮಾಡಲು ಉದ್ದೇಶಿಸಿದ್ದು, ಇದು ಜಾರಿಗೆ ಬಂದಲ್ಲಿ, ತಮ್ಮ ಬ್ಯಾಂಕಿನ ಸದಸ್ಯರಿಗೂ ಈ ಯೋಜನೆಯನ್ನು ಜಾರಿಗೊಳಿಸಲು ಚಿಂತಿಸಲಾಗಿದೆ. ಈ ಬಗ್ಗೆ ಬ್ಯಾಂಕಿನ ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರಿಗೆ 'ಗ್ರೂಪ್ ಹೆಲ್ತ್ ಇನ್ಸೂರೆನ್ಸ್' ಮಾಡಿಸಲಾಗಿದೆ ಎಂದು ಅವರು ಹೇಳಿದರು.

ಬ್ಯಾಂಕಿನ ಸದಸ್ಯರು ಆರೋಗ್ಯದ ದೃಷ್ಟಿಯಿಂದ ಸ್ಥಾಪಿಸಿರುವ ಆರಾಧ್ಯ ಆಯುಸ್ಮಾನ್ ನಿಧಿಯಿಂದ ಚಿಕಿತ್ಸಾ ವೆಚ್ಚ ನೀಡಲಾಗುತ್ತಿದ್ದು, ಕಳೆದ 4 ವರ್ಷಗಳಲ್ಲಿ 742 ಸದಸ್ಯರಿಗೆ 30.44 ಲಕ್ಷ ರೂ. ಮತ್ತು ಸದರಿ ಸಾಲಿನಲ್ಲಿ 73 ಸದಸ್ಯ ಫಲಾನುಭವಿಗಳು ವಿವಿಧ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚ 9.39 ಲಕ್ಷ ರೂ.ಗಳನ್ನು ಸಂಬಂಧಿಸಿದ ಆಸ್ಪತ್ರೆಗಳಿಗೆ ನೇರವಾಗಿ ಪಾವತಿಸಲಾಗಿದೆ.

ಬ್ಯಾಂಕಿನ ಸದಸ್ಯರ ಮತ್ತು ಗ್ರಾಹಕರಿಗೆ ಶೀಘ್ರ ಸೇವೆ ಒದಗಿಸುವ ನಿಟ್ಟಿನಲ್ಲಿ ಎಟಿಎಂ ಕಾರ್ಡುಗಳನ್ನು ವಿತರಿಸಲಾಗುತ್ತಿದೆ. ಬ್ಯಾಂಕಿನ ಆಡಳಿತ ಕಚೇರಿ ಮುಂಭಾಗದಲ್ಲಿ ಎಟಿಎಂ ಸ್ಥಾಪಿಸಲಾಗಿದ್ದು, ಸದ್ಯದಲ್ಲೇ ಗ್ರಾಹಕರ ಸೇವೆಗೆ ಸಮರ್ಪಿಸಲಾಗುವುದು. ಬ್ಯಾಂಕಿಂಗ್ ವ್ಯವಹಾರವನ್ನು ಡಿಜಿಟಲೈಜ್ ಮಾಡುವ ಉದ್ದೇಶ ಹೊಂದಿದ್ದು, ಮೊಬೈಲ್ ಬ್ಯಾಂಕಿಂಗ್, ಪಿಓಎಸ್ ಮತ್ತು ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಬ್ಯಾಂಕಿನ ಆಡಳಿತ ಕಚೇರಿ ಮತ್ತು ಹರಿಹರ ಶಾಖೆಯ ಮೇಲ್ಭಾಗದಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಲಾಗಿದೆ. ತನ್ನದೇ ಆದ ವಿದ್ಯುತ್ ಉತ್ಪಾದನಾ ಘಟಕದಿಂದಾಗಿ ಬ್ಯಾಂಕಿನ ವಿದ್ಯುತ್ಶಕ್ತಿ ವೆಚ್ಚವನ್ನು ಕಡಿತಗೊಳಿಸಿದಂತಾಗಿದೆ ಎಂದು ಮುರುಗೇಶ್ ವಿವರಿಸಿದ್ದಾರೆ.

ತಮ್ಮ ಬ್ಯಾಂಕ್ 50ನೇ ವರ್ಷಾಚರಣೆಯ ಸುವರ್ಣ ಮಹೋತ್ಸವ ಸಂಭ್ರಮವನ್ನು ಅರ್ಥಪೂರ್ಣವಾಗಿ ಶೀಘ್ರದಲ್ಲೇ ಆಚರಿಸಲು ಉದ್ದೇಶಿಸಲಾಗಿದ್ದು, ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಬ್ಯಾಂಕಿನ ಆಡಳಿತ ಕಚೇರಿ ಮತ್ತು ಆಡಳಿತ ಕಚೇರಿ ಹೊಂದಿಕೊಂಡಿರುವ ಸಿಓಎಂ ಶಾಖೆಯ ಒಳಾಂಗಣವನ್ನು ಸಂಪೂರ್ಣ ಅತ್ಯಾಧುನಿಕವಾಗಿ ನವೀಕರಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಬ್ಯಾಂಕಿನ ಸುವರ್ಣ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟ್ ಯೋಜನೆಯನ್ನು 2021 ಡಿಸೆಂಬರ್‌ನಿಂದ ಜಾರಿಗೆ ತರಲಾಗಿದ್ದು, 2022 ಜನವರಿ ವೇಳೆಗೆ ಬ್ಯಾಂಕಿನ ಸದಸ್ಯರ ಮತ್ತು ಗ್ರಾಹಕರಿಗೆ ಸದರಿ ಠೇವಣಿ ಯೋಜನೆಯಲ್ಲಿ ಶೇ.7.50 ರಷ್ಟು ಬಡ್ಡಿಯನ್ನು ನೀಡಲಾಗಿದೆ. ಈ ಯೋಜನೆಯಲ್ಲಿ ಕೇವಲ 2 ತಿಂಗಳಲ್ಲಿ 22 ಕೋಟಿ ರೂ. ಠೇವಣಿ ಸಂಗ್ರಹಿಸಿದೆ. ಇದು ಸದಸ್ಯರು ಮತ್ತು ಗ್ರಾಹಕರು ಬ್ಯಾಂಕಿನ ಮೇಲಿಟ್ಟಿರುವ ದೃಢವಾದ ನಂಬಿಕೆ ಮತ್ತು ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ತಮ್ಮ ಬ್ಯಾಂಕ್ ಪ್ರಗತಿಯತ್ತ ಸಾಗಲು ಬ್ಯಾಂಕಿನ ಸದಸ್ಯರು, ಗ್ರಾಹಕರು, ಠೇವಣಿದಾರರ ಸಹಕಾರ ಮತ್ತು ಪ್ರೋತ್ಸಾಹದಿಂದ ಸಾಧ್ಯವಾಗಿದೆ ಎಂದಿರುವ ಮುರುಗೇಶ್, ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸುತ್ತಿರುವ ಎಲ್ಲರನ್ನೂ ಸ್ಮರಿಸಿ, ಕೃತಜ್ಞತೆ ಸಲ್ಲಿಸಿದ್ದಾರೆ. ವಿಶೇಷವಾಗಿ ಸಾಲ ಪಡೆದ ಸದಸ್ಯರು ನಿಗದಿತ ಅವಧಿಯಲ್ಲಿ ಸಾಲವನ್ನು ಮರು ಪಾವತಿ ಮಾಡುವುದರ ಮೂಲಕ ಪ್ರಗತಿಗೆ ಕಾರಣರಾಗಿದ್ದು, ವಿಶೇಷವಾಗಿ ಉತ್ತಮ ಸಾಲಗಾರರಿಗೆ ಧನ್ಯವಾದ ಹೇಳಿದ್ದಾರೆ.

ಬ್ಯಾಂಕಿನ ಉಪಾಧ್ಯಕ್ಷ ಎಸ್.ಕೆ. ವೀರಣ್ಣ, ನಿರ್ದೇಶಕರುಗಳಾದ ರಮಣ್ ಲಾಲ್ ಪಿ. ಸಂಘವಿ, ಕಿರುವಾಡಿ ವಿ. ಸೋಮಶೇಖರ್, ಎ. ಹೆಚ್. ಕುಬೇರಪ್ಪ, ಶ್ರೀಮತಿ ಜಯಮ್ಮ ಪರಶುರಾಮಪ್ಪ, ಶಂಕರ್ ಖಟಾವ್ ಕರ್, ಎಸ್. ಕೆ. ಪ್ರಭು ಪ್ರಸಾದ್, ಶ್ರೀಮತಿ ಶಶಿಕಲಾ ರುದ್ರಯ್ಯ, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ.ನಾಗೇಂದ್ರಚಾರಿ, ಶ್ರೀಮತಿ ಅನಿಲ ಇಂದೂಧರ್ ನಿಶಾನಿಮಠ, ಎ.ಕೊಟ್ರೇಶ್, ಶ್ರೀಮತಿ ಉಮಾ ವಾಗೇಶ್, ವೃತ್ತಿಪರ ನಿರ್ದೇಶಕರುಗಳಾದ ಆರ್.ವಿ. ಶಿರಸಾಲಿಮಠ್, ಕಿರಣ್ ಶೆಟ್ಟಿ, ವಿಶೇಷ ಆಹ್ವಾನಿತರಾದ ಜಿ.ಕೆ. ವೀರಣ್ಣ, ಕೆ.ಹೆಚ್. ಶಿವಯೋಗಪ್ಪ, ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಕೆ.ಎಂ. ಬಸವರಾಜ್, ಶ್ರೀಮತಿ ಜೆ.ಸಿ. ವಸುಂಧರಾ, ಶ್ರೀಮತಿ ಕೆ.ಎಂ. ಶೈಲಾ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಪಕ ಎಂ. ಶಿವಲಿಂಗಸ್ವಾಮಿ ಸಭೆಯ ಕಾರ್ಯಕಲಾಪವನ್ನು ನಿರ್ವಹಿಸಿದರು.

# ಲಂಕಾಗೆ ವಿಮಾನ ಹಾರಾಟ ಕಡಿತ

ನವದೆಹಲಿ, ಏ. 3 – ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ಉಲ್ಬಣಿಸುತ್ತಿರುವುದರ ನಡುವೆಯೇ, ಆ ದೇಶಕ್ಕೆ ನಡೆಸುವ ವಿಮಾನ ಹಾರಾಟವನ್ನು 16 ರಿಂದ 13ಕ್ಕೆ ಇಳಿಸುವುದಾಗಿ ಏರ್ ಇಡಿಯಾ ತಿಳಿಸಿದೆ. ಬೇಡಿಕೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಏ.9ರಿಂದ ಈ ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ವಿಮಾನಯಾನ ಸಂಸ್ಥೆ ತಿಳಿಸಿದೆ. ಪ್ರಸಕ್ತ ವಾರಕ್ಕೆ 16 ವಿಮಾನಗಳ ಹಾರಾಟ ನಡೆಸಲಾಗುತ್ತಿದೆ. ಏಪ್ರಿಲ್ 9ರ ನಂತರ ಪ್ರತಿ ವಾರಕ್ಕೆ 13 ವಿಮಾನಗಳು ಮಾತ್ರ ಹಾರಾಟ ನಡೆಸಲಿವೆ ಎಂದು ವಿಮಾಯಾನ ಸಂಸ್ಥೆಯ ವಕ್ತಾರರು ಹೇಳಿದ್ದಾರೆ.

# ಕೊವ್ಯಾಕ್ಸಿನ್ ಪೂರೈಕೆಗೆ ಡಬ್ಲ್ಯೂ.ಹೆಚ್.ಒ. ತಡೆ

ಹೈದರಾಬಾದ್, ಏ. 3 – ಭಾರತ್ ಬಯೋಟೆಕ್ ಉತ್ಪಾದಿಸುವ ಕೊವ್ಯಾಕ್ಸಿನ್ ಲಸಿಕೆಯ ಪೂರೈಕೆಯನ್ನು ತಡೆದಿರುವುದಾಗಿ ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯೂ.ಹೆಚ್.ಒ.) ತಿಳಿಸಿದೆಯಲ್ಲದೇ, ಈಗಾಗಲೇ ಲಸಿಕೆ ಪೂರೈಕೆಯಾಗಿರುವ ದೇಶಗಳು ಹಾಗೂ ಖರೀದಿ ಸಂಸ್ಥೆಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆ ನೀಡಿದೆ. (4ನೇ ಪುಟಕ್ಕೆ)

# ಉಕ್ರೇನ್ ಯುದ್ಧದಲ್ಲಿ ಏರುತ್ತಿರುವ ರಷ್ಯಾ ಸೈನಿಕರ ಸಾವು

## ಕುಸಿಯುತ್ತಿರುವ ಸ್ಥೈರ್ಯ, ಆದೇಶ ಪಾಲಿಸಲು ನಿರಾಕರಣೆಗಳ ವರದಿ

ಲಂಡನ್, ಏ. 3 – ಉಕ್ರೇನ್‌ನಲ್ಲಿರುವ ರಷ್ಯಾ ಪಡೆಗಳು ಮುಂದುವರೆಯಲು ಸಾಧ್ಯವಾಗದೇ ಸ್ಥಗಿತಗೊಂಡಿವೆ. ಸೈನಿಕ ಕಾರ್ಯಾಚರಣೆಯಲ್ಲಿ ಅನೇಕ ಹಿನ್ನಡೆಗಳಾಗಿವೆ. ಇದರಿಂದಾಗಿ ಹಲವು ಸೈನಿಕರು ಹೋರಾಟ ನಡೆಸಲು ಮತ್ತು ಆದೇಶಗಳನ್ನು ಪಾಲಿಸಲು ನಿರಾಕರಿಸುತ್ತಿದ್ದಾರೆ ಎಂಬ ವರದಿಗಳು ಬಂದಿವೆ.

ಹೋರಾಟ ಆರಂಭವಾದ ಎರಡು ತಿಂಗಳ ನಂತರ 15 ಸಾವಿರ ರಷ್ಯಾ ಸೈನಿಕರು ಹತರಾಗಿದ್ದಾರೆ. ಇದು ಆಫ್ಘಾನಿಸ್ತಾನದಲ್ಲಿ ಒಂಭತ್ತು ವರ್ಷಗಳ ಕಾಲ ನಡೆದ ಹೋರಾಟದಲ್ಲಿ ಹತರಾದ ಸೋವಿಯತ್ ಸೈನಿಕರಿಗೆ ಸಮನಾಗಿದೆ ಎಂದು ನ್ಯಾಟೋ ಅಂದಾಜಿಸಿದೆ.

ಉಕ್ರೇನ್‌ನಲ್ಲಿ ರಷ್ಯಾ ಸೈನಿಕರ ಸ್ಥೈರ್ಯ ಕುಸಿಯುತ್ತಿದೆ. ಆದರೆ, ರಷ್ಯಾ ಸೈನಿಕರು ಸಂಘರ್ಷದ ಸಮಯದಲ್ಲಿ ಆದೇಶ ಪಾಲಿಸಲು ನಿರಾಕರಿಸಿರುವುದು ಮೊದಲ ಬಾರಿಯೇನೂ ಅಲ್ಲ. 1905ರಲ್ಲಿ ರಷ್ಯಾ - ಜಪಾನ್ ಸಮರದ ವೇಳೆ ಪೊಟೆಮ್ಕಿನ್ ಸಮರ ಹಡಗಿನಲ್ಲಿ ಬಂಡಾಯವಾಗಿದ್ದು ಇತಿಹಾದಲ್ಲಿ ಸೇರಿದೆ.

ಎರಡನೇ ಮಹಾಯುದ್ಧ ಸಮಯದಲ್ಲಿ ರಷ್ಯಾದಲ್ಲಿ ಅಧಿಕಾರದಲ್ಲಿದ್ದ ಜೋಸೆಫ್ ಸ್ಟಾಲಿನ್, ಶರಣಾಗತಿಯ ವಿರುದ್ಧ ಕಠಿಣ ಆದೇಶ ಹೊರಡಿಸಿದ್ದರು. ಯುದ್ಧದಿಂದ ಹಿಂದೆ ಸರಿಯುವವರನ್ನು ಕೊಲ್ಲುವಂತೆ ಅವರು 1942ರಲ್ಲಿ ಕಟ್ಟುನಿಟ್ಟಾಗಿ ತಿಳಿಸಿದ್ದರು. ಆಗ ರಷ್ಯಾ ಸೈನ್ಯ ತನ್ನದೇ 1.50 ಲಕ್ಷ ಜನರನ್ನು ಹತ್ಯೆ ಮಾಡಿತ್ತು. ಇಷ್ಟಾದರೂ 14 ಲಕ್ಷದಷ್ಟು ರಷ್ಯಾದ ಸೈನಿಕರು ಯುದ್ಧ ಖೈದಿಗಳಾಗಿ, ಶತ್ರುಗಳ ಜೊತೆ ಕೈ ಜೋಡಿಸಿದ್ದರು.

ದಶಕಗಳ ನಂತರ ಆಗಿನ ಯು.ಎಸ್.ಎಸ್.ಆರ್. ಮತ್ತು ಆಫ್ಘಾನಿಸ್ತಾನಗಳ ನಡುವೆ ನಡೆದ ಯುದ್ಧದಲ್ಲೂ ಇದೇ ಪರಿಸ್ಥಿತಿ ಉಂಟಾಗಿತ್ತು. ಗೆರಿಲ್ಲಾ ಯುದ್ಧದಲ್ಲಿ ಪರಿಣಿತಿ ಹೊಂದಿರದ ಸೋವಿಯತ್ ಸೈನಿಕರಿಗೆ, ಯುದ್ಧ ಪರಕೀಯವಾಗಿ ಕಂಡಿತ್ತು. ಹಲವಾರು ಸೈನಿಕರು ಸ್ಥಳೀಯವಾಗಿ ನಡೆಸಲಾಗುತ್ತಿದ್ದ ದೌರ್ಜನ್ಯದಿಂದ ಬೇಸತ್ತು ಹಿಂದೆ ಸರಿದಿದ್ದರು.

1994-96ರಲ್ಲಿ ಚೆಚೆನ್ಯಾ ಮೊದಲ ಸಂಘರ್ಷದಲ್ಲೂ ವ್ಯಾಪಕ ಅಸಹನೆ ಉಂಟಾಗಿತ್ತು. ಸಂಪೂರ್ಣ ಅನುಭವ ರಹಿತ ಸೈನಿಕರನ್ನು ಯುದ್ಧಕ್ಕೆ ರವಾನಿಸಿದ್ದು ವ್ಯಾಪಕ ಸಮಸ್ಯೆಗೆ ಕಾರಣವಾಗಿತ್ತು.

ಉಕ್ರೇನ್‌ನಲ್ಲಿ ಉಂಟಾಗಿರುವ ಕಠಿಣ ಪರಿಸ್ಥಿತಿ, ಸಮರ ತರಬೇತಿಯಲ್ಲಿನ ಕೊರತೆ ಹಾಗೂ ಸೈದ್ಧಾಂತಿಕ ಬದ್ಧತೆ ಕುಸಿಯುತ್ತಿರುವುದು ಸೈನ್ಯ ತೊರೆಯಲು ಪ್ರಮುಖ ಕಾರಣ ಎನ್ನಲಾಗುತ್ತಿದೆ. ಯುದ್ಧ ಆರಂಭವಾದ ಕೆಲವೇ ವಾರಗಳಲ್ಲಿ ಈ ಪರಿಸ್ಥಿತಿ ಉಂಟಾಗಿರುವುದು ಗಮನಾರ್ಹವಾಗಿದೆ.

ರಷ್ಯಾ ಸೈನ್ಯವನ್ನು ಸುಧಾರಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂಬ ವರದಿಗಳು ಈ ಹಿಂದಿನಿಂದಲೂ ಬರುತ್ತಿದ್ದವು ಆದರೆ, 2014ರಲ್ಲಿ ಪ್ರಕಟವಾಗಿದ್ದ ವರದಿಯ ಪ್ರಕಾರ, ರಷ್ಯಾ ಸೈನಿಕ ದಳದ ಶೇ.25ರಷ್ಟು ಸಿಬ್ಬಂದಿಗೆ ಉಪಕರಣಗಳ ನಿರ್ವಹಣೆ ತಿಳಿದಿಲ್ಲ.

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಸುಧಾರಣಾ ಕ್ರಮಗಳಿಂದಾಗಿ ಒಟ್ಟಾರೆ ಸೈನ್ಯದ ಬಜೆಟ್ ಹೆಚ್ಚಾಗಿದೆ. ಆದರೆ, ಸೈನಿಕರಿಗೆ ನೀಡಲಾಗುವ ವೇತನ ಹೆಚ್ಚಿಲ್ಲ.

ಅಮೆರಿಕಗೆ ಹೋಲಿಸಿದರೆ ರಷ್ಯಾದ ಸೈನಿಕರ ವೇತನ ತೀರಾ ಕಡಿಮೆಯಾಗಿದೆ. ಮೂರು ವರ್ಷಗಳ ಗುತ್ತಿಗೆ ಅವಧಿಗೆ ಸೈನಿಕರನ್ನು ನೇಮಿಸಿಕೊಳ್ಳಲಾಗುತ್ತದೆ. ತರಬೇತಿ ದೊರೆಯುವ ಅವಧಿಯೂ ಕಡಿಮೆ. ಇದೆಲ್ಲವೂ ಸೈನಿಕರ ಸ್ಥೈರ್ಯ ಕುಂದಲು ಕಾರಣವಾಗಿವೆ.

ಸೈನ್ಯದ ಸ್ಥೈರ್ಯ ಹೆಚ್ಚಿಸಲು ರಷ್ಯಾದ ಜನರಲ್‌ಗಳನ್ನು ಮುಂಚೂಣಿ ಹೋರಾಟಕ್ಕೆ ಕಳಿಸಲಾಗುತ್ತಿದೆ. ಇದರಿಂದಾಗಿ ಸೈನ್ಯದಲ್ಲಿ ಸಂಯೋಜನೆಯ ಕೊರತೆಯಾಗುತ್ತಿದೆ. ಮುಂಚೂಣಿ ಹೋರಾಟದಲ್ಲಿ ತೊಡಗಿದ್ದ ಸೈನ್ಯದ ಹಲವಾರು ಜನರಲ್‌ಗಳು ಹತರಾಗಿದ್ದಾರೆ. ಎರಡನೇ ಮಹಾಯುದ್ಧದ (4ನೇ ಪುಟಕ್ಕೆ)

# ಯೂರಿಯಾ ಹಗರಣದ ತನಿಖೆ : ಸಿಬಿಐಗೆ ವಿಶೇಷ ನ್ಯಾಯಾಲಯದ ತರಾಟೆ

ನವದೆಹಲಿ, ಏ. 3 – 1995ರ ಯುರಿಯಾ ಹಗರಣಕ್ಕೆ ಸಂಬಂಧಿಸಿದಂತೆ ಪ್ರಕರಣವೊಂದನ್ನು ಮುಚ್ಚುವಂತೆ ಸಿ.ಬಿ.ಐ. ಮಾಡಿಕೊಂಡ ಮನವಿಯನ್ನು ವಿಶೇಷ ನ್ಯಾಯಾಲಯ ತಿರಸ್ಕರಿಸಿದ್ದು, ಈ ರೀತಿ ನ್ಯಾಯದ ವೈಫಲ್ಯತೆ ಮತ್ತೆ ಆಗದಂತೆ ನೋಡಿಕೊಳ್ಳುವಂತೆ ತಿಳಿಸಿದೆ.

ಸಿಬಿಐ 1999ರ ನಂತರ ಪ್ರಕರಣದ ತನಿಖೆಯನ್ನೇ ಮಾಡಿಲ್ಲ. ಸಿ.ಬಿ.ಐ. ವರದಿಯ ಕಡತ ನಿರ್ಲಕ್ಷಿಸಿದ್ದು ಸ್ಪಷ್ಟವಾಗಿದೆ ಎಂದು ವಿಶೇಷ ನ್ಯಾಯಮೂರ್ತಿ ಸುರಿಂದರ್ ಎಸ್. ರಥಿ ಸ್ಪಷ್ಟವಾಗಿ ಹೇಳಿದ್ದಾರೆ.

ಈ ಬಗ್ಗೆ ಸಿಬಿಐನ ಭ್ರಷ್ಟಾಚಾರ ವಿರೋಧಿ ಘಟಕ ತನಿಖೆ ನಡೆಸಿ ವರದಿ ಸಲ್ಲಿಸಬೇಕೆಂದು ನ್ಯಾಯಾಲಯ ಹೇಳಿದೆ. ರಾಷ್ಟ್ರೀಯ ರಸಗೊಬ್ಬರ ನಿಯಮಿತಕ್ಕೆ 133 ಕೋಟಿ ರೂ. ವಂಚನೆಯಾದ ಬಗ್ಗೆ ಪ್ರಕರಣ ದಾಖಲಿಸಲಾಗಿತ್ತು. ಮುಖ್ಯ ಪ್ರಕರಣದಲ್ಲಿ ಎನ್.ಎಫ್.ಎಲ್.ನ ಹಲವು ಅಧಿಕಾರಿಗಳು, ಖಾಸಗಿ ಉದ್ಯಮಿ ಹಾಗೂ ಮಾಜಿ ಪ್ರಧಾನ ಮಂತ್ರಿ ಪಿ.ವಿ. ನರಸಿಂಹ ರಾವ್ ಅವರ ಸಂಬಂಧಿ ಬಿ. ಸಂಜೀವ ರಾವ್ ದೋಷಿಗಳೆಂಬುದು ಸಾಬೀತಾಗಿತ್ತು.

ಈ ದೊಡ್ಡ ಹಗರಣದ ಒಂದು (4ನೇ ಪುಟಕ್ಕೆ)

# ಕಾಂ. ಶೇಖರಪ್ಪ, ಕಾಂ. ಸುರೇಶ್, ಕಾಂ.ಪಂಪಾಪತಿ ಸ್ಮರಣೆ



ದಾವಣಗೆರೆ, ಏ.3- ಹುತಾತ್ಮರ ಸ್ಮರಣೆಯೊಂದಿಗೆ ಅವರುಗಳ ಆದರ್ಶಗಳ ಹೊಸ ಗುರಿಯತ್ತ ಸಾಗೋಣ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಕರೆ ನೀಡಿದರು.

ನಗರಕ್ಕೆ ಸಮೀಪದ ಆವರಗೆರೆಯಲ್ಲಿ ಕಾಂ. ಶೇಖರಪ್ಪ ಮತ್ತು ಸುರೇಶ್ ಅವರ 52 ನೇ ಹುತಾತ್ಮರ ದಿನಾಚರಣೆ ಹಾಗೂ ಹಿರಿಯ ಕಾರ್ಮಿಕ ಮುಖಂಡರು, ಮಾಜಿ ಶಾಸಕ ಪಂಪಾಪತಿ ಅವರ 20ನೇ ವರ್ಷದ ಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶೋಷಣೆ ರಹಿತ ಸಮಾಜಕ್ಕಾಗಿ ದುಡಿದ ಹುತಾತ್ಮ ಮುಖಂಡರ ಆದರ್ಶಗಳನ್ನು ಜೀವನದಲ್ಲಿ ಸದಾ ಅಳವಡಿಸಿಕೊಂಡು ಶೋಷಣೆ ರಹಿತ ಸಮಾಜಕ್ಕಾಗಿ ಹೋರಾಟ ಮುಂದುವರೆಸೋಣ ಎಂದು ತಿಳಿಸಿದರು.

ಹಿರಿಯ ಕಾರ್ಮಿಕ ಮುಖಂಡ ಆನಂದ ರಾಜ್ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಎಐಟಿಯುಸಿ ಜಿಲ್ಲಾಧ್ಯಕ್ಷ ರಾಘವೇಂದ್ರ ನಾಯರಿ, ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಉಮೇಶ್, ಮುಖಂಡರುಗಳಾದ ಎಂ.ಬಿ. ಶಾರದಮ್ಮ, ಜಬೀನಾ ಖಾನಂ, ಶೇಖರಪ್ಪ ನವರ ಪುತ್ರರು, ನಿವೃತ್ತ ಉಪನ್ಯಾಸಕ ಬಸವರಾಜ್, ಪಂಪಾಪತಿಯವರ ಪುತ್ರರು, ಉಪನ್ಯಾಸಕ ಡಾ.ಸುರೇಶ್ ಬಾಬು, ಹೆಚ್. ಕೆ. ಕೊಟ್ರಪ್ಪ, ಆವರಗೆರೆ ವಾಸು ಮಾತನಾಡಿದರು.

ಟಿ.ಎಸ್. ನಾಗರಾಜ್, ಮಹಮದ್ ರಫೀಕ್, ವಿ. ಲಕ್ಷ್ಮಣ ಸೇರಿದಂತೆ ಇತರರು ಇದ್ದರು. ಆರಂಭದಲ್ಲಿ ಇಪ್ಟಾ ಗೆಳೆಯರು ಜಾಗೃತಿ ಗೀತೆಗಳನ್ನು ಹಾಡಿದರು. ಕೆ. ಬಾನಪ್ಪ ಸ್ವಾಗತಿಸಿದರು, ಎ. ತಿಪ್ಪೇಶ್ ವಂದಿಸಿದರು.

# ಸರ್ಕಾರಿ ನೌಕರರ ಕ್ರೀಡಾಕೂಟ ಆನ್‌ಲೈನ್‌ನಲ್ಲಿ ನೋಂದಣಿ

ದಾವಣಗೆರೆ, ಏ. 3- ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಮೇ ತಿಂಗಳಿನಲ್ಲಿ ಸಂಘಟಿಸಲಾಗುವುದರಿಂದ, ಅರ್ಹ ನೌಕರ ಕ್ರೀಡಾಪಟುಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ.

ನಗರದಲ್ಲಿ ಈಚೆಗೆ ಜರುಗಿದ ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟದ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವರು ಹಾಗೂ ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಬಹುದು.

ಅರ್ಹ ನೌಕರ ಕ್ರೀಡಾಪಟುಗಳು ಕ್ರೀಡಾಕೂಟದಲ್ಲಿ ಭಾಗವಹಿಸಲು ಆನ್‌ಲೈನ್‌ನಲ್ಲಿ ಇದೇ ದಿನಾಂಕ 10ರ ಒಳಗಾಗಿ ನೊಂದಣಿ ಮಾಡಿಕೊಳ್ಳಬೇಕು.

# ನಗರದಲ್ಲಿ ಇಂದು ಪುರಾಣ

98ನೇ ವರ್ಷದ ಶ್ರೀ ರಾಮೋತ್ಸವದ ಅಂಗವಾಗಿ ಕೋದಂಡ ರಾಮ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 8 ರಿಂದ ಮಧ್ಯಾಹ್ನ 12ರವರೆಗೆ ಶ್ರೀರಾಮಾಯಣ ಪಾರಾಯಣ ಪುರಾಣ ಪ್ರವಚನ, ಮೃತ್ಯುಂಜಯ ಜಪ, ನವಗ್ರಹ ಜಪ, ಸೂರ್ಯ ನಮಸ್ಕಾರ ಹಾಗೂ ಸಂಜೆ 6.30ರಿಂದ 9.30ರವರೆಗೆ ಹರಿಕಥಾ ಶ್ರವಣ, ಮಂತ್ರ ಪುಷ್ಪ, ರಾಜಾಶೀರ್ವಾದ ಮಹಾಮಂಗಳಾರತಿ ಜರುಗಲಿದೆ.

# ಜಿಲ್ಲೆಯಾದ್ಯಂತ ಬೆಲೆಯೇರಿಕೆ ಮುಕ್ತ ಭಾರತ ಆಂದೋಲನ

## ಬೆಲೆಯೇರಿಕೆ ವಿರುದ್ಧ ನಗರದಲ್ಲಿ ಕಾಂಗ್ರೆಸ್ ಪ್ರತಿಭಟನೆ



ದಾವಣಗೆರೆ, ಏ. 3- ಇಂಧನ, ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಶುಕ್ರವಾರ ದಾವಣಗೆರೆ ಜಿಲ್ಲಾ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಸುವ ಮೂಲಕ ಜಿಲ್ಲೆಯಾದ್ಯಂತ ಬೆಲೆಯೇರಿಕೆ ಮುಕ್ತ ಭಾರತ ಆಂದೋಲನಕ್ಕೆ ಚಾಲನೆ ನೀಡಲಾಯಿತು.

ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ನೇತೃತ್ವದಲ್ಲಿ ಅಡುಗೆ ಸಿಲಿಂಡರ್ ಗಳಿಗೆ ಮತ್ತು ವಾಹನಗಳಿಗೆ ಹೂವಿನ ಮಾಲೆ ಹಾಕಿದ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ದಿನೇಶ್ ಕೆ. ಶೆಟ್ಟಿ ಮಾತನಾಡಿ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಇಂದು ಪ್ರತಿ ಲೀಟರ್‌ಗೆ 80 ಪೈಸೆಗಳಷ್ಟು ಏರಿಕೆಯಾಗಿದ್ದು, ಕಳೆದ 10 ದಿನಗಳಲ್ಲಿ ಪ್ರತಿ ಲೀಟರ್‌ಗೆ 6.40 ರೂ.ನಷ್ಟು ಹೆಚ್ಚಳವಾಗಿದೆ. ಸ್ಥಳೀಯ ತೆರಿಗೆಯನ್ನು ಅವಲಂಬಿಸಿ, ಇಂಧನ ಬೆಲೆ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುತ್ತಿದ್ದು, ಮಾರ್ಚ್ 22ರ ನಂತರ ಸತತ 9 ಬಾರಿ ಇಂಧನ ಬೆಲೆ ಹೆಚ್ಚಳವಾಗಿದೆ. ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ದೂರಿದರು.

ಬೆಲೆಯೇರಿಕೆ ಮುಕ್ತ ಭಾರತ ಆಂದೋಲನದಡಿ ಇಂಧನ, ಅಡುಗೆ ಅನಿಲ ಸೇರಿದಂತೆ, ಹಣದುಬ್ಬರದ ವಿರುದ್ಧ ಕಾಂಗ್ರೆಸ್ ವಾರದವರೆಗೆ ದೇಶಾದ್ಯಂತ ಪ್ರತಿಭಟನೆ ಕೈಗೊಳ್ಳಲಿದ್ದು, ದಾವಣಗೆರೆ ಜಿಲ್ಲೆಯಲ್ಲೂ ಸಹ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ತಮ್ಮ ತಮ್ಮ ಮನೆಗಳ ಮುಂಭಾಗದಲ್ಲಿ ಅಡುಗೆ ಅನಿಲ ಸಿಲಿಂಡರ್ ಇಟ್ಟು ಜಾಗಟೆ ಭಾರಿಸುವ ಮೂಲಕ ಪ್ರತಿಭಟನೆ ನಡೆಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್.ಮಂಜುನಾಥ್, ಸದಸ್ಯ ಎ.ನಾಗರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಅಯೂಬ್ ಪೈಲ್ವಾನ್, ಕೆ.ಜಿ.ಶಿವಕುಮಾರ್, ಸಾಮಾಜಿಕ ಜಾಲತಾಣದ ಹರೀಶ್ ಕೆ.ಎಲ್. ಬಸಾಪುರ, ಹಿಂದುಳಿದ ಘಟಕದ ಜಮ್ನಳ್ಳಿ ನಾಗರಾಜ್, ಮುಖಂಡರುಗಳಾದ ವಿಜಯ್ ಜೈನ್, ರಾಜು ಭಂಡಾರಿ, ಶ್ರೀಕಾಂತ್ ಬಗೇರ, ಎಸ್. ರವಿ, ಗೋಪಾಲ್, ಯುವರಾಜ್, ಸತೀಶ್ ರಾಜ್, ಕವಿತಾ, ಮಹಿಳಾ ಕಾಂಗ್ರೆಸ್‌ನ ದ್ರಾಕ್ಷಾಯಣಮ್ಮ, ರಾಜೇಶ್ವರಿ, ನಾಗರತ್ನಮ್ಮ, ಶುಭಮಂಗಳ ಮತ್ತಿತರರಿದ್ದರು.

# ರಾಣೇಬೆನ್ನೂರು : ದಂಡಗಿಹಳ್ಳಿ ದೇವಸ್ಥಾನ ಉದ್ಘಾಟನೆ ಸಿರಿಗೆರೆ, ಹರಿಹರ ಶ್ರೀಗಳ ಆಗಮನ



ರಾಣೇಬೆನ್ನೂರು, ಏ.3- ತಾಲ್ಲೂಕಿನ ದಂಡಗಿಹಳ್ಳಿ ಶ್ರೀ ಬಸವೇಶ್ವರ ದೇವಸ್ಥಾನ ಉದ್ಘಾಟನೆ, ಕಳಸಾರೋಹಣ, ಹೂವಿನ ತೇರು, ಗುಗ್ಗಳ ಹಾಗೂ ರಥೋತ್ಸವ ಕಾರ್ಯಕ್ರಮವು ಇಂದಿನಿಂದ ಆರಂಭಗೊಂಡಿದ್ದು ಇದೇ ದಿನಾಂಕ 8ರವರೆಗೆ ವಿಜೃಂಭಣೆಯಿಂದ ಜರುಗಲಿವೆ.

ಸಿರಿಗೆರೆ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹರಿಹರ ಶ್ರೀ ವಚನಾನಂದ ಸ್ವಾಮೀಜಿ, ರಟ್ಟಿಹಳ್ಳಿ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ, ಚೌಡಯ್ಯದಾನಾಪುರದ ಶ್ರೀ ಶಾಂತಭೀಷ್ಮ ಸ್ವಾಮೀಜಿ ಹಾಗೂ ಜನಪ್ರತಿನಿಧಿಗಳು ಪಾಲ್ಗೊಳ್ಳುವರು.

ತಾಲ್ಲೂಕಿ ಚಿಕ್ಕಗ್ರಾಮ ದಂಡಗಿಹಳ್ಳಿಯಲ್ಲಿ ರೈತರೇ ಹೆಚ್ಚು ಇದ್ದು, ಪ್ರತಿ ಎಕರೆಗೆ 5 ಸಾವಿರದಂತೆ ಪ್ರತಿ ರೈತರು ದೇಣಿಗೆ ನೀಡಿದ್ದಾರೆ. ಧರ್ಮಸ್ಥಳ ಸಮಿತಿಯವರ ಸಹಾಯ ಸೇರಿದಂತೆ ದೇವಸ್ಥಾನ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ಹಣ ವೆಚ್ಚವಾಗಿದೆ ಎಂದು ಸಮಿತಿ ಅಧ್ಯಕ್ಷ ಹಾಲನಗೌಡ ಮುಂದಿನ ಮನಿ ತಿಳಿಸಿದ್ದಾರೆ

# ಹಲಾಲ್-ಜಟ್ಕಾ ಕಟ್ ವಿವಾದದಿಂದ ಕುಕ್ಕುಟ ಉದ್ಯಮಕ್ಕೆ ಪೆಟ್ಟು

ದಾವಣಗೆರೆ, ಏ.3- ಹಲಾಲ್ ಹಾಗೂ ಜಟ್ಕಾ ಕಟ್ ಪದ್ಧತಿಯನ್ನು ನಿಷೇಧಿಸಿ, ಕಸಾಯಿ ಖಾನೆಗಳನ್ನು ತೆರೆದು ಉತ್ಪಾದಕರಿಂದ ನೇರವಾಗಿ ಗ್ರಾಹಕರಿಗೆ ಮಾಂಸ ಮಾರಾಟವಾಗುವ ವ್ಯವಸ್ಥೆಗೆ ಸರ್ಕಾರವೇ ಮುಂದಾಗಬೇಕೆಂದು ಕರ್ನಾಟಕ ಕುಕ್ಕುಟ ಸಹಕಾರಿ ಮಹಾಮಂಡಳದ ನಿರ್ದೇಶಕ ಮಲ್ಲಾಪುರ ದೇವರಾಜ್ ಒತ್ತಾಯಿಸಿದರು.

ರಾಜ್ಯದಲ್ಲಿ ಧರ್ಮದ ಹೆಸರಿನಲ್ಲಿ ಹಲಾಲ್ ಮತ್ತು ಜಟ್ಕಾ ಕಟ್ ವಿವಾದ ಸೃಷ್ಟಿಸಿ, ಅಶಾಂತಿಗೆ ಕಾರಣವಾಗುತ್ತಿದೆ. ಈ ವಿವಾದದಿಂದ ಮಾಂಸ ಉದ್ಯಮಕ್ಕೆ ಪೆಟ್ಟುಬಿದ್ದಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಹಲಾಲ್ ಹಾಗೂ ಜಟ್ಕಾ ಕಟ್ ಇವೆರಡೂ ವ್ಯಾಪಾರದ ತಂತ್ರವಷ್ಟೇ. ಆದರೂ ಈ ಎರಡೂ ಅವೈಜ್ಞಾನಿಕವೇ. ಆಯಾ ಧರ್ಮಕ್ಕೇ ಅದರದ್ದೇ ಆದ ಆಹಾರ ಪದ್ಧತಿ ಇರುತ್ತದೆ. ಅದನ್ನು ಪ್ರಶ್ನಿಸುವ ಅಧಿಕಾರ ಇರುವುದಿಲ್ಲ. ಆದರೆ ರಾಜ್ಯದಲ್ಲಿ ಹಲಾಲ್ ಮತ್ತು ಜಟ್ಕಾ ಕಟ್ ವಿವಾದ ಎಬ್ಬಿಸುತ್ತಿರುವುದು ಸರಿಯಲ್ಲ. ಇದರಿಂದ ಕುಕ್ಕುಟ ಉದ್ಯಮದಲ್ಲಿ ಹಾಕಿದ ಬಂಡವಾಳವೂ ಕೈಗೆ ಸಿಗದಂತಾಗಿ ಆರ್ಥಿಕವಾಗಿ ಹಿಂಜರಿತ ಕಂಡಿದೆ ಎಂದು ಆಕ್ಷೇಪಿಸಿದರು.

ಸರ್ಕಾರ ಕೂಡಲೇ ಮೀನು ಮಾರುಕಟ್ಟೆ ಮಾಡಿರುವಂತೆ ಜಿಲ್ಲಾ ಮಟ್ಟದಲ್ಲಿ ಕಸಾಯಿಖಾನೆ ಆರಂಭಿಸಬೇಕು, ನಗರ ಮತ್ತು ಪಟ್ಟಣ ಭಾಗಗಳಲ್ಲಿ ಸರ್ಕಾರದಡಿ ಮಾರುಕಟ್ಟೆ ಸ್ಥಾಪಿಸಿ, ಮಳಿಗೆಗಳನ್ನು ಮಾಡಬೇಕು. ಆ ಮುಖೇನ ಉತ್ಪಾದಕರಿಂದ ನೇರವಾಗಿ ಗ್ರಾಹಕರಿಗೆ ತಲುಪಲಿದೆ. ಈ ರೀತಿಯಾಗಿ ದಾವಣಗೆರೆಯ ಆಯ್ದ ನಾಲ್ಕು ಭಾಗಗಳಲ್ಲಿ ಮಳಿಗೆಗಳನ್ನು ತೆರೆಯುವಂತೆ ಕಳೆದ ಒಂದು ವರ್ಷದ ಹಿಂದೆಯೇ ನಗರ ಪಾಲಿಕೆ ಆಯುಕ್ತರಿಗೆ ಮನವಿ ಮಾಡಲಾಗಿತ್ತು. ಆದರೆ ಜನಪ್ರತಿನಿಧಿಗಳ ಇಚ್ಛಾ ಶಕ್ತಿ ಕೊರತೆ ಕಾಡುತ್ತಿದೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಕೋಳಿ ಸಾಕಾಣಿಕೆದಾರರಾದ ಐಗೂರು ಶಿವಮೂರ್ತಪ್ಪ, ನಾಗರಾಜ್ ಇದ್ದರು.


# ರೆಡ್ ಕ್ರಾಸ್ ಸೊಸೈಟಿಯಿಂದ ಮಾಸ್ಕ್ ವಿತರಣೆ



ದಾವಣಗೆರೆ, ಏ.3- ಭಾರತೀಯ ರೆಡ್ ಕ್ರಾಸ್ ಸೊಸೈಟಿ ಇವರಿಂದ ಇತ್ತೀಚೆಗೆ ಸರ್ಕಾರಿ/ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳಲ್ಲಿನ 8,9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಮಾಸ್ಕ್ 1,60,000 ಮಾಸ್ಕ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಚೇರ್ಮನ್ ಡಾ. ಎ.ಎಂ. ಶಿವಕುಮಾರ್, ಗೌಡ್ರು ಚನ್ನಬಸಪ್ಪ, ಟಿ.ಕರಿಬಸಪ್ಪ, ರವಿಕುಮಾರ್ ಮತ್ತಿತರರಿದ್ದರು.

# ನಸೀರ್ ಅಹಮದ್ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ



ದಾವಣಗೆರೆ,ಏ.3- ಸಮಾಜ ಸೇವಕ ಸಿ.ಆರ್. ನಸೀರ್ ಅಹಮದ್ ಕಾಂಗ್ರೆಸ್ ತೊರೆದು ಸಂಸದ ಜಿ.ಎಂ.ಸಿದ್ದೇಶ್ವರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು. ಶಾಸಕ ಎಸ್.ಎ.ರವೀಂದ್ರನಾಥ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮುಖಂಡ ಜಯಪ್ರಕಾಶ್ ಕೊಂಡಜ್ಜಿ ಹಾಗೂ ಇತರರು ಉಪಸ್ಥಿತರಿದ್ದರು.

# ಅಂತರ್ ಜಿಲ್ಲಾ ಕಳ್ಳರ ಬಂಧನ : 14 ಬೈಕ್ ವಶ



**ಮಲೇಬೆನ್ನೂರು**

ಮಲೇಬೆನ್ನೂರು, ಏ.3- ಇಲ್ಲಿನ ಪೊಲೀಸ್ ಠಾಣೆಯ ಪೊಲೀಸರು ಮೂವರು ಅಂತರ್ ಜಿಲ್ಲಾ ಕಳ್ಳತನದ ಆರೋಪಿತರನ್ನು ಬಂಧಿಸಿ ಹರಪನಹಳ್ಳಿ, ದಾವಣಗೆರೆ, ಹೊನ್ನಾಳಿ, ಹರಿಹರ ಗ್ರಾಮಾಂತರ ಮತ್ತು ಶಿರಾಳಕೊಪ್ಪ ಪೊಲೀಸ್ ಠಾಣೆಗಳಲ್ಲಿ ನಡೆದಿದ್ದ ಒಟ್ಟು 18 ಪ್ರಕರಣಗಳನ್ನು ಭೇದಿಸಿ 7,41,500 ರೂ. ಬೆಲೆ ಬಾಳುವ ಓಮ್ನಿ ವ್ಯಾನ್ ಹಾಗೂ 66,500 ರೂ. ನಗದು ಹಣ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆಂದು ದಾವಣಗೆರೆ ಜಿಲ್ಲಾ ಎಎಸ್ಪಿ ಆರ್.ಬಿ. ಬಸರಗಿ ತಿಳಿಸಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಎಸ್ಪಿ ಸಿ.ಬಿ. ರಿಷ್ಯಂತ್ ಅವರ ಮಾರ್ಗದರ್ಶನದಲ್ಲಿ ಗ್ರಾಮಾಂತರ ಡಿವೈಎಸ್ಪಿ ಬಿ.ಎಸ್. ಬಸವರಾಜ್ ನೇತೃತ್ವದಲ್ಲಿ ಸಿಪಿಐ ಸತೀಶ್‌ಕುಮಾರ್ ಮತ್ತು ಮಲೇಬೆನ್ನೂರು ಪಿಎಸ್‌ಐ ರವಿಕುಮಾರ್, ಶಂಕರಗೌಡ ಪಾಟೀಲ್ ಮತ್ತು ಸಿಬ್ಬಂದಿ ಯವರ ತಂಡ ಕಳ್ಳರನ್ನು ಕಳುವಾದ ವಾಹನಗಳ ಸಮೇತ ಬಂಧಿಸುವಲ್ಲಿ ಶ್ರಮಿಸಿದ್ದಾರೆ ಎಂದು ಅಭಿನಂದಿಸಿದರು.

ಡಿವೈಎಸ್ಪಿ ಬಸರಗಿ, ಸಿಪಿಐ ಸತೀಶ್‌ಕುಮಾರ್, ಪಿಎಸ್‌ಐ ರವಿಕುಮಾರ್, ಶಂಕರಗೌಡ ಪಾಟೀಲ್, ಪ್ರೊಬೇಷನರಿ ಪಿಎಸ್‌ಐ ಶ್ರೀಪತಿ ಗಿನ್ನಿ. ಎಎಸ್‌ಐ ಬಸವರಾಜ್ ಸುದ್ದಿಗೋಷ್ಠಿಯಲ್ಲಿದ್ದರು.

# ಶ್ರದ್ಧೆಯಿಂದ ಮಾಡಿದ ಅಭ್ಯಾಸ ಮಹತ್ತರ ಸಾಧನೆಗೆ ದಾರಿ

## ಅತ್ತಿಗೆರೆಯ ಶಾಲೆಯಲ್ಲಿ ಪ್ರೊ. ಹೆಚ್. ಚನ್ನಪ್ಪ ಅಭಿಮತ



ಅತ್ತಿಗೆರೆ,ಏ.3-ವಿದ್ಯಾರ್ಥಿಗಳು ಅತ್ಯಂತ ಆಸಕ್ತಿ ಮತ್ತು ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಜೀವನದಲ್ಲಿ ಮಹತ್ತರ ಸಾಧನೆ ಮಾಡಬಹುದು ಎಂದು ಶ್ರೀಮತಿ ಚನ್ನಪ್ಪ ಶಿವಲಿಂಗಪ್ಪ ಗುರುಬಸಪ್ಪ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಪ್ರೊ॥ ಹೆಚ್.ಚನ್ನಪ್ಪ ಕರೆ ನೀಡಿದರು.


ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿಗಳು ಏರ್ಪಡಿಸಿದ್ದ ಶಾರದಾ ಪೂಜಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಪೋಷಕರು ನಿಮ್ಮ ಬಗ್ಗೆ ತುಂಬಾ ಆಕಾಂಕ್ಷೆಗಳನ್ನು ಹೊಂದಿರುತ್ತಾರೆ, ಉಪನ್ಯಾಸಕರೆಲ್ಲರೂ ಹೆಚ್ಚು ಕಾಳಜಿ ವಹಿಸಿ, ವೈಯಕ್ತಿಕ ಗಮನ ಕೊಟ್ಟು ಪಾಠ ಪ್ರವಚನ ಮಾಡಿರುತ್ತಾರೆ. ಅಲ್ಲದೇ ಪಠ್ಯೇತರ ಚಟುವಟಿಕೆಗಳ ಮೂಲಕ ನಿಮ್ಮ ಶೈಕ್ಷಣಿಕ ಪ್ರಗತಿಗೆ ಸತತ ಪ್ರಯತ್ನ ಮಾಡಿರುತ್ತಾರೆ. ಅವರ ಶ್ರಮ ಸಾರ್ಥಕವಾಗಬೇಕಾದರೆ ನೀವೆಲ್ಲರೂ ತೇರ್ಗಡೆಯಾಗಿ ಕಾಲೇಜಿಗೆ ಉತ್ತಮ ಹೆಸರು ತರಬೇಕು. ಇದೇ ನೀವು ಸಲ್ಲಿಸಬೇಕಾದ ಗುರು ಕಾಣಿಕೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಹೆಚ್. ಚಂದ್ರಪ್ಪ ಮಾತನಾಡಿ, ಉಪನ್ಯಾಸಕ ರೆಲ್ಲ ಅತ್ಯಂತ ಪ್ರಾಮಾಣಿಕತೆಯಿಂದ ವಿಶೇಷ ತರಗತಿಗಳನ್ನು ನಡೆಸಿ, ಮಾರ್ಗದರ್ಶನ ಮಾಡಿದ್ದಾರೆ. ನೀವೆಲ್ಲರೂ ಉತ್ತಮ ಶ್ರೇಣಿಯಲ್ಲಿ ಪಾಸಾದರೆ ನಮಗೆ ಗುರು ಕಾಣಿಕೆ ಸಲ್ಲಿಸಿದಂತಾಗುತ್ತದೆ ಎಂದರು.

ಉಪನ್ಯಾಸಕರಾದ ಎನ್.ಎಸ್. ಪರಮೇಶ್ವರಪ್ಪ, ಸುಭಾಷ್ ಸಿಂಧೆ, ಗುಡ್ಡಪ್ಪ ಓಲಿಕಾರ್, ಬಸವರಾಜಪ್ಪ, ಶ್ರೀಮತಿ ನಾಗವೇಣಿ, ಸಲ್ಮಾ, ಶಿವಶಂಕರ್ ಮತ್ತು ಭೋಜರಾಜಪ್ಪ ಉಪಸ್ಥಿತರಿದ್ದರು.

ಅಮೃತ ಸಂಗಡಿಗರು ಪ್ರಾರ್ಥಿಸಿ ದರು. ಸಂಜನ ಸ್ವಾಗತಿಸಿದರು.ವೀರೇಶ್ ವಂದಿಸಿದರು.

॥ ಶ್ರೀ ಸೀತಾರಾಮ ಪ್ರಸನ್ನ ॥

**98ನೇ ವರ್ಷದ ಶ್ರೀ ರಾಮೋತ್ಸವ ಆಹ್ವಾನ ಪತ್ರಿಕೆ**

ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನ್ನೃಪ ಶಾಲಿವಾಹನ ಶಕೆ 1944ನೇ ಶ್ರೀ ಶುಭಕೃತುನಾಮ ಸಂವತ್ಸರದ ಚೈತ್ರ ಶುದ್ಧ ಪ್ರತಿಪದ ದಿ:02.04.2022ನೇ ಶನಿವಾರದಿಂದ ಲಾಗಾಯ್ತು ದಾವಣಗೆರೆಯಲ್ಲಿರುವ ಧರ್ಮಪ್ರವರ್ತ ರಾಜನಹಳ್ಳಿ ಶ್ರೀ ಹನುಮಂತಪ್ಪನವರು ಕಟ್ಟಿಸಿರುವ ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಶ್ರೀ ರಾಮೋತ್ಸವದ ಪ್ರಯುಕ್ತ ಪ್ರತಿದಿನವೂ ಬೆಳಿಗ್ಗೆ 8 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಶ್ರೀರಾಮಾಯಣ ಪಾರಾಯಣ, ಪುರಾಣ ಪ್ರವಚನ, ಮೃತ್ಯುಂಜಯ ಜಪ, ನವಗ್ರಹ ಜಪ, ಸೂರ್ಯ ನಮಸ್ಕಾರ ಹಾಗೂ ಪ್ರತಿದಿನ ಸಾಯಂಕಾಲ 6.30 ರಿಂದ 9.30ರ ವರೆಗೆ ಹರಿಕಥಾ ಶ್ರವಣ, ಮಂತ್ರಪುಷ್ಪ ರಾಜಾಶೀರ್ವಾದ ಪೂರ್ವಕ ಮಹಾಮಂಗಳಾರತಿ ಈ ರೀತಿ ನಡೆಸಲು ನಿಶ್ಚಯಿಸಿರುತ್ತದೆ. ಚೈತ್ರ ಶುದ್ಧ ನವಮಿ ದಿ:10.04.2022ನೇ ಭಾನುವಾರ ಬೆಳಿಗ್ಗೆ 11.30 ಗಂಟೆಗೆ **ಶ್ರೀ ರಾಮ ಜನ್ಮೋತ್ಸವ** ಚೈತ್ರ ಶುದ್ಧ ದಶಮಿ ದಿ:11.04.2022ನೇ ಸೋಮವಾರ ಮಧ್ಯಾಹ್ನ 12 ಗಂಟೆಗೆ "**ಶ್ರೀ ರಾಮ ಪಟ್ಟಾಭಿಷೇಕ**", ಸಾಯಂಕಾಲ 7 ಗಂಟೆಗೆ ರಥೋತ್ಸವವನ್ನೂ ಸಹ ನೆರವೇರಿಸಲು ನಿಶ್ಚಯಿಸಿರುತ್ತಾರೆ. ಆದ್ದರಿಂದ ತಾವುಗಳು ಪ್ರತಿದಿನವೂ ಸಕಾಲಕ್ಕೆ ದಯಮಾಡಿಸಿ ಶ್ರೀ ಸೀತಾರಾಮದೇವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಪ್ರಾರ್ಥನೆ.

**ಅಧ್ಯಕ್ಷರ ಆಯ್ಕೆ : ಅಭಿನಂದನೆಗಳು**



ಸ್ಕ್ರ್ಯಾಪ್ ಮರ್ಚೆಂಟ್ಸ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ನೂತನ ಅಧ್ಯಕ್ಷರನ್ನಾಗಿ

**ಬಿ.ಪಿ. ಮಹಮ್ಮದ್ ಶಫೀ ಉಲ್ಲಾ**

ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ನಿರ್ದೇಶಕರು ಕಾರ್ಯಕಾರಿ ಮಂಡಳಿ ಸದಸ್ಯರು ನೂತನ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು.

**ಕಾರ್ಯಕಾರಿ ಮಂಡಳಿ, ಸಿಬ್ಬಂದಿ ವರ್ಗ**

**ಸ್ಕ್ರಾಪ್ ಮರ್ಚೆಂಟ್ಸ್ ಕ್ರೆಡಿಟ್ ಕೋ ಆಪ್ ಸೊಸೈಟಿ**

ಗುಜರಿ ಲೈನ್, ದಾವಣಗೆರೆ.

# ರಾಸಾಯನಿಕ ರಸಗೊಬ್ಬರವೆಂಬ ವಿಷ...!

ರಾಸಾಯನಿಕ ರಸಗೊಬ್ಬರಗಳ ಪರಿಕಲ್ಪನೆ ನಮ್ಮ ದೇಶಕ್ಕೆ ಪರಿಚಯವಾಗಿದ್ದು 2ನೇ ಮಹಾಯುದ್ಧದ ಕಾಲದಲ್ಲಿ. ಮದ್ದು ಗುಂಡುಗಳಿಗೆ ಬಳಸುತ್ತಿದ್ದ ವಿಷಕಾರಿ ರಾಸಾಯನಿಕ (ಗನ್ ಪೌಡರ್) ಇಂದು ತನ್ನ ಕಬಂಧ ಬಾಹುವನ್ನು ಇಡೀ ದೇಶದ ತುಂಬಾ ವ್ಯಾಪಿಸಿ, ಕೃಷಿ ಕ್ಷೇತ್ರದ ಅವನತಿಗೆ ನಾಂದಿಯಾಡಿದೆ ಎಂದರೆ ನೀವುಗಳು ನಂಬುತ್ತೀರಾ ? ನಂಬಲೇಬೇಕು.



ಏಕೆಂದರೆ ಇಂದು ರಾಸಾಯನಿಕ ರಸಗೊಬ್ಬರ ನಮ್ಮ ರೈತನ ಬದುಕಿನ ಅವಿಭಾಜ್ಯ ಅಂಗವಾಗಿದೆ. ಪ್ರತಿದಿನ ನಾವು ಸೇವಿಸುವ ಆಹಾರ ವಿಷ ಎಂದು ತಿಳಿದೋ ತಿಳಿಯದೆಯೋ ಅನಿವಾರ್ಯವಾಗಿ ಒಪ್ಪಿಕೊಂಡಿದ್ದೇವೆ ಮತ್ತು ಅಪ್ಪಿಕೊಂಡಿದ್ದೇವೆ.

ಈ ವಿಷ ವರ್ತುಲದಿಂದ ಹೇಗೆ ಹೊರಬರಬೇಕು ಎನ್ನುವುದನ್ನೂ ಯೋಚಿಸದೆ ಕಾಲವನ್ನು ಕಳೆಯುತ್ತಾ ವ್ಯರ್ಥ ಚಿಂತನೆಯಲ್ಲಿ, ಕೇವಲ ಹಣ ಗಳಿಕೆಯಲ್ಲಿ ತೊಡಗಿದ್ದೇವೆಯೇ ಹೊರತು, ಉತ್ತಮ ಆರೋಗ್ಯದ ವೃದ್ಧಿಗೆ, ಮಾನವೀಯ ಸಂಬಂಧಗಳಿಗೆ, ಜೀವನ ಮೌಲ್ಯಗಳಿಗೆ ಬೆಲೆ ಕೊಡುತ್ತಿಲ್ಲ. ಹಾಗಾಗಿ ಹವಾಮಾನದ ವೈಪರೀತ್ಯ, ಮಳೆಯ ಕೊರತೆ. ಜೀವಜಲದ ಅಭಾವ ಇನ್ನೂ ಹತ್ತು ಹಲವು ಕಾರಣಗಳಿಗೆ ನಾವುಗಳೇ ಜವಾಬ್ದಾರರಾಗಿದ್ದೇವಲ್ಲವೇ?

ದೇಶದಲ್ಲಿ ಶೇ.75 ಕೃಷಿ ಬದುಕನ್ನು ಅವಲಂಬಿಸಿದ್ದೇವೆ. ಕೇವಲ 30 ವರ್ಷಗಳ ಹಿಂದೆ ನಮ್ಮ ಬದುಕು ಹೇಗಿತ್ತು? ಸಮೃದ್ಧ ಮಳೆಯಾಗುತ್ತಿತ್ತು, ಕೆರೆಕಟ್ಟೆಗಳು ತುಂಬಿ ತುಳುಕುತ್ತಿದ್ದವು, ತೆರೆದ ಬಾವಿಗಳಲ್ಲಿ ನಾವುಗಳು ಈಜಾಡುತ್ತಿದ್ದ ರೀತಿಯನ್ನು ಇಂದು ನೆನೆಸಿಕೊಂಡರೆ ಮನಸ್ಸಿಗೆ ನೋವು ಮತ್ತು ಬೇಸರವಾಗುತ್ತದೆ.

ವ್ಯವಸಾಯಕ್ಕೆ ಯೋಗ್ಯವಾಗಿದ್ದ ಮಣ್ಣು ಇಂದು ಸಂಪೂರ್ಣ ಖನಿಜೀಕರಣಗೊಳ್ಳುತ್ತಿದೆ. ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಶೇ.0.3 ಗೆ ಹೋಗಿದೆ. ಆರೋಗ್ಯವಂತ ಮಣ್ಣೆಂದರೆ ಶೇ. 2ರಷ್ಟು ಸಾವಯವ ಇಂಗಾ ಲವಿದ್ದರೆ ಅದು ವ್ಯವಸಾಯಕ್ಕೆ ಯೋಗ್ಯವಾದ, ಫಲವತ್ತಾದ, ಜೀವಂತವಾದ ಮಣ್ಣು.

ಪ್ರತಿದಿನ ನಾವುಗಳು ಲಕ್ಷ ಲಕ್ಷ ಟನ್‌ಗಟ್ಟಲೆ ರಾಸಾಯನಿಕ ರಸಗೊಬ್ಬರ ಮತ್ತು ಕೀಟನಾಶಕಗಳನ್ನು ತಂದು ನಮ್ಮ ಭೂಮಿಗೆ ಸುರಿದು ನಮ್ಮ ಸಮೃದ್ಧವಾದ ಭೂಮಿ ತಾಯಿಯನ್ನು ಬರಡು ಮಾಡಿದ್ದೇವೆ.

ಯಾವ ಒಂದು ಹಿಡಿ ಮಣ್ಣಿನಲ್ಲಿ 2 ಕೋಟಿಗೂ ಅಧಿಕ ಜೀವಕೋಶಗಳಿರುತ್ತವೆಯೋ ಆ ಮಣ್ಣು ಜೀವಂತ ಮಣ್ಣು ಎಂಬುದು ಸಾವಯವ ಕೃಷಿ ತಜ್ಞ ಹುಲ್ಲುನಾಚೇಗೌಡರ ಮನದಾಳದ ಮಾತು. ಇಂದು ಇವರು ಲಕ್ಷಾಂತರ ರೈತ ಸಮುದಾಯಕ್ಕೆ ಅವರ ಹೊಲದ ಬದುಗಳ ಮೇಲೆಯೇ ಕುಳಿತು ರೈತಾಪಿ ವರ್ಗಕ್ಕೆ ಮನವರಿಕೆ ಮಾಡುತ್ತಿದ್ದಾರೆ. ಇಂತಹ ಅನುಭವಿ ಸೇವಾ ಮನೋಭಾವದ ಸಾವಿರಾರು ಕೃಷಿ ತಜ್ಞರ ಅವಶ್ಯಕತೆ ಇದೆ.

ಈ ನಿಟ್ಟಿನಲ್ಲಿ ನಮ್ಮನ್ನಾಳುವ ಸರ್ಕಾರಗಳು ಮತ್ತೊಂದು ಹಸಿರು ಕ್ರಾಂತಿಯತ್ತ ಯೋಚಿಸಿ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಸಂಪೂರ್ಣವಾಗಿ ನಿಲ್ಲಿಸಿ, ಇವುಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಸಂಪೂರ್ಣವಾಗಿ ಮುಚ್ಚದೇ ಈ ಕಾರ್ಖಾನೆಗಳು ಸಾವಯವ ಕೃಷಿ ಉತ್ಪನ್ನಗಳನ್ನು ಕಡಿಮೆ ಖರ್ಚಿನಲ್ಲಿ ತಯಾರಿಸಿ, ರೈತರಿಗೆ ಒದಗಿಸುವಂತೆ ಕಾಯ್ದೆ ರೂಪಿಸಬೇಕು. ಇಲ್ಲದೇ ಹೋದಲ್ಲಿ ಮುಂಬರುವ ದಿನಗಳನ್ನು ನಾವುಗಳು ಊಹಿಸಲು ಸಾಧ್ಯವಿಲ್ಲ.

ಪ್ರಸ್ತುತ ದಿನಗಳಲ್ಲಿ 800 ರಿಂದ 1 ಸಾವಿರ ಅಡಿ ಬೋರ್ ತೆಗೆದರೂ ಜೀವಜಲದ ಕೊರತೆ ಎದ್ದು ಕಾಣುತ್ತಿದೆಯೆಂದರೆ, ಯಥೇಚ್ಛವಾದ ರಾಸಾಯನಿಕಗಳನ್ನು ಬಳಸಿ ಕೊಂದಿದ್ದೇವೆ, ಕೊಲ್ಲುತ್ತಲೂ ಇದ್ದೇವೆ, ಉದಾಹರಣೆಗೆ ನಮ್ಮೂರು ಜಗಳೂರು ತಾಲ್ಲೂಕಿನ ದಿದ್ದಿಗೆ, ಕೇವಲ 35 ವರ್ಷಗಳ ಹಿಂದೆ ಸಮೃದ್ಧವಾದ ಬದುಕಿತ್ತು, ಆದರೆ ಈಗ ನಮ್ಮ ಮಕ್ಕಳಿಗೆ ಉತ್ತಮ ಬದುಕನ್ನು ರೂಪಿಸಿಕೊಳ್ಳಲೂ ಆಗದ ನರಕ ಸದೃಶ ಬದುಕಿಗೆ ನಾವುಗಳೇ ಕಾರಣವಾಗಿದ್ದೇವೆ.

ಪರಿಸರ ಸ್ನೇಹಿ ಇಂಧನ ಇಂದಿನ ಅವಶ್ಯಕತೆ. ಕೇವಲ ಹಣದಿಂದ ಸಾಫ್ಟ್‌ವೇರ್ ಕ್ರಾಂತಿಯಿಂದ, ಕೈಗಾರಿಕಾ ಕ್ರಾಂತಿಯಿಂದ, ಆಧುನಿಕತೆಯ ಬದುಕಿನ ಜೀವನ ಶೈಲಿಯಿಂದ, ನಮ್ಮಗಳ ಹಸಿವು ನೀಗುವುದಿಲ್ಲ. ಪರಿಸರ ಸ್ನೇಹಿ ಕಾರ್ಖಾನೆಗಳು, ಪರಿಸರ ಸ್ನೇಹಿ ಕೃಷಿ, ಪರಿಸರ ಸ್ನೇಹಿ ಜೀವನ, ಮಾನವ ಶಕ್ತಿಯ ಸಕಾರಾತ್ಮಕ ಸದ್ಬಳಕೆ ಇಂದಿನ ಅವಶ್ಯಕತೆ. ಈ ನಿಟ್ಟಿನಲ್ಲಿ ನಮ್ಮನ್ನಾಳುವ ಸರ್ಕಾರಗಳನ್ನು ಬಡಿದೆಚ್ಚರಿಸಬೇಕಾಗಿದೆ.

ಕೃಷಿ ವಿಶ್ವವಿದ್ಯಾಲಯಗಳು ಕೃಷಿ ವಿಜ್ಞಾನಿಗಳಿಗೆ ಕೋಟ್ಯಾಂತರ ಅನುದಾನ ಹಾಗು ಸಂಬಳ ನೀಡುತ್ತಿದೆ. ಸಮಗ್ರ ಸಾವಯವ ಕೃಷಿಯನ್ನು ಬೆಂಬಲಿಸುವ ಹಾಗು ರೈತನ ಹೊಲದ ಬದುವಿನ ಮೇಲೆ ಕುಳಿತು ಸಲಹೆ ನೀಡುವ ಕೃಷಿ ವಿಜ್ಞಾನಿಗಳನ್ನು ಬೆಂಬಲಿಸುವ ಕಾನೂನು ಇಂದಿನ ಅವಶ್ಯಕತೆ.


ಸರ್ಕಾರ ಈಗಿನ ಮಕ್ಕಳಿಗೆ ಪ್ರಾಥಮಿಕ ಹಂತದಿಂದ ಪದವಿವರೆಗೆ ಪಠ್ಯಪುಸ್ತಕದಲ್ಲಿ ಸಮಗ್ರ ಸಾವಯವ ಕುರಿತಾದ, ನೀರಿನ ಮಿತ ಬಳಕೆಯ ಅರಿವು, ಪ್ಲಾಸ್ಟಿಕ್ ತ್ಯಾಜ್ಯದಿಂದ ಆಗುವ ದುಷ್ಪರಿಣಾಮಗಳು, ಮಳೆ ನೀರು ಕೊಯ್ಲು, ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಅರಿವನ್ನು ಮೂಡಿಸುವಂತಾಗಬೇಕಿದೆ.

ನಮ್ಮ ಜಮೀನು ಹಾಗು ಬದುವಿನಲ್ಲಿ ಅರಣ್ಯ ಕೃಷಿಯನ್ನು ಯಥೇಚ್ಛವಾಗಿ ಮಾಡುವುದರಿಂದ ಮಣ್ಣಿನ ಸವಕಳಿ ತಡೆಗಟ್ಟಬಹುದು ಹಾಗು ಎಲೆಯಂತಹ ತ್ಯಾಜ್ಯದಿಂದ ಹ್ಯೂಮಸ್ ಉತ್ಪತ್ತಿಯಾಗುತ್ತದೆ. ಹ್ಯೂಮಸ್‌ನಿಂದ ನಾವು ಕೃಷಿ ಮಾಡುವ ಮಣ್ಣಿನಲ್ಲಿ ಸಾವಯವ ಇಂಗಾಲ, ಅಧಿಕ ಪ್ರಮಾಣದಲ್ಲಿ ನೈಸರ್ಗಿಕವಾಗಿ ಉತ್ಪತ್ತಿಯಾಗುವುದರಿಂದ ಭೂಮಿಯಲ್ಲಿ ಸಾಕಷ್ಟು ಸಂಖ್ಯೆಯ ಎರೆಹುಳುಗಳು ಉತ್ಪತ್ತಿಯಾಗುತ್ತವೆ ಹಾಗು ರೈತನ ಮಿತ್ರರು ಆಗುತ್ತವೆ.

**'ಕೇವಲ ಹಣದಿಂದ, ಸಾಫ್ಟ್‌ವೇರ್ ಕ್ರಾಂತಿಯಿಂದ, ಕೈಗಾರಿಕಾ ಕ್ರಾಂತಿಯಿಂದ, ಆಧುನಿಕತೆಯ ಬದುಕಿನ ಜೀವನ ಶೈಲಿಯಿಂದ ನಮ್ಮಗಳ ಹಸಿವು ನೀಗುವುದಿಲ್ಲ. ಪರಿಸರ ಸ್ನೇಹಿ ಇಂಧನ, ಪರಿಸರ ಸ್ನೇಹಿ ಕಾರ್ಖಾನೆಗಳು, ಪರಿಸರ ಸ್ನೇಹಿ ಕೃಷಿ, ಪರಿಸರ ಸ್ನೇಹಿ ಜೀವನ, ಮಾನವ ಶಕ್ತಿಯ ಸಕಾರಾತ್ಮಕ ಸದ್ಬಳಕೆ ಇಂದಿನ ಅವಶ್ಯಕತೆ. ಈ ನಿಟ್ಟಿನಲ್ಲಿ ನಮ್ಮನ್ನಾಳುವ ಸರ್ಕಾರಗಳನ್ನು ಬಡಿದೆಚ್ಚರಿಸಬೇಕಾಗಿದೆ.'**

ಈ ರೀತಿ ಕ್ರಾಂತಿಕಾರಕ ಬದಲಾವಣೆಗಳನ್ನು ಸರ್ಕಾರಗಳು ತರಬೇಕು, ನಾವುಗಳೂ ಸಹ ಅರಿತುಕೊಂಡು ಅಳವಡಿಸಿಕೊಳ್ಳಬೇಕು. ಈ ರೀತಿ ಮಾಡಿದಲ್ಲಿ ಸಾರಜನಕದ ಅವಶ್ಯತೆಯಿಲ್ಲ, ಸಾರಜನಕ ನೈಸರ್ಗಿಕವಾಗಿಯೇ ಸಿಗುವುದರಿಂದ ಯೂರಿಯಾ ಗೊಬ್ಬರದ ಅವಶ್ಯಕತೆಯಿಲ್ಲ. ನೈಸರ್ಗಿಕವಾಗಿ ನಮ್ಮ ಕಣ್ಣೆದುರಿನಲ್ಲೇ ಸಾಕಷ್ಟು ಗಿಡಮರಗಳನ್ನು ನಾವುಗಳು ನೋಡುತ್ತೇವೆ. ಅವುಗಳಿಗೆ ನಾವುಗಳು ಯಾವುದೇ ರೀತಿಯ ಸಂರಕ್ಷಣೆ ಮಾಡುವುದಿಲ್ಲ. ಏಕೆಂದರೆ ಅವುಗಳ ಬುಡದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹ್ಯೂಮಸ್ ಮತ್ತು ಸಾವಯವ ಇಂಗಾಲ ಉತ್ಪತ್ತಿಯಾಗುತ್ತಿರುತ್ತದೆ.

ಸಮಗ್ರ ಸಾವಯವ ಕೃಷಿಯನ್ನು ಬೆಂಬಲಿಸಲು ನಮ್ಮ ಸಮಾಜದ ಜೊತೆ ಅವಿನಾಭಾವ ಸಂಬಂಧ ಹೊಂದಿದ ಅನೇಕ ಸಂಘ-ಸಂಸ್ಥೆಗಳ ಮುಖಂಡರು, ಮಠಾಧಿಪತಿಗಳು, ರೈತ ಸಂಘಗಳು, ಪ್ರಗತಿಪರ ಚಿಂತಕರು ಎಲ್ಲರೂ ಕೈಜೋಡಿಸಿ ನಮ್ಮನ್ನಾಳುವ ಸರ್ಕಾರಗಳನ್ನು ಹಾಗು ಧುರೀಣರುಗಳನ್ನು ಬಡಿದೆಚ್ಚರಿಸಬೇಕು. ಇಲ್ಲವಾದಲ್ಲಿ ಸರ್ವನಾಶ ಖಂಡಿತ.



**- ಕೆ.ಬಿ. ದಿದ್ದಿಗೆ ಮಹಾದೇವಪ್ಪ**

# ಸಾಮೂಹಿಕ ಉತ್ಸಾಹ, ಆನಂದದ ಹಬ್ಬವಾಗಿದ್ದ ಯುಗಾದಿ

ಈಗ ಯುಗಾದಿ ಹಬ್ಬವೆಂದರೆ ಅಭ್ಯಂಜನ, ಮಾವು ಬೇವಿನ ತೋರಣ, ಬೇವು-ಬೆಲ್ಲ ನಿವೇದನ, ಶಾವಿಗೆ, ಹೋಳಿಗೆ ಭೋಜನ, ಪಂಚಾಂಗ ಶ್ರವಣ, ಚಂದ್ರದರ್ಶನಗಳಿಗೆ ಸೀಮಿತವಾಗಿದೆ. ಆದರೆ, ಪ್ರಾಚೀನ ಭಾರತದಲ್ಲಿ ಯುಗಾದಿಯು 'ವಸಂತೋತ್ಸವ' ಎಂಬುದಾಗಿ ಫಾಲ್ಗುಣ ಶುದ್ಧ ಹುಣ್ಣಿಮೆ ಅಂದರೆ ಹೋಳಿ ಹುಣ್ಣಿಮೆಯಂದು 'ಕಾಮ ದಹನೋತ್ಸವ' ದಿಂದ ಆರಂಭವಾಗಿ ಚೈತ್ರ ಶುದ್ಧ ಹುಣ್ಣಿಮೆ ಅಂದರೆ ಚಿತ್ರಾ ಪೂರ್ಣಿಮೆಯಂದು 'ಕಾಮ ಜನನೋತ್ಸವ'ವಾಗಿ ಒಂದು ತಿಂಗಳು ಪೂರ್ತಿ ಸಾಮೂಹಿಕವಾಗಿ ಸಂಭ್ರಮಿಸುವುದು ಆಗಿತ್ತು ಎಂದು ಪ್ರಾಚೀನ ಮಹಾಕಾವ್ಯಾದಿ ಸಾಹಿತ್ಯಗಳಿಂದ ತಿಳಿದು ಬರುತ್ತದೆ. ಅದರಲ್ಲೂ ಮುಖ್ಯವಾಗಿ ಚೈತ್ರ ಶುದ್ಧ ಪಾಡ್ಯ ಅಂದರೆ 'ಯುಗಾದಿ'ಯಂದು 'ಸಹಕಾರ ಭಂಜಿಕೋತ್ಸವ' ಮಾವಿನ ಮರದ ಚಿಗುರುಗಳನ್ನು ಕಿತ್ತು ತಿನ್ನುವುದು, ಬಿದಿಗೆಯಂದು 'ಅಶೋಕತ್ವಂಸಿಕಾ' ಅಂದರೆ ಅಶೋಕ ವೃಕ್ಷದ ಹೂವುಗಳನ್ನು ಕಿತ್ತು, ಗಂಡು - ಹೆಣ್ಣು ಎಂಬ ಭೇದವಿಲ್ಲದೇ ಎಲ್ಲರೂ ಮುಡಿದು ಸಂಭ್ರಮಿ ಸುವುದು, ತೃತೀಯಾ ದಿನದಂದು 'ಕುಂದ ಚತುರ್ಥಿ' ಅಂದರೆ ಮಲ್ಲಿಗೆ ಹೂವನ್ನು ಮಾಲೆ ಮಾಡಿ ದೇವರಿಗೆ ಅರ್ಪಿಸಿ, ಮಲ್ಲಿಗೆ ಮಾಲೆಯನ್ನು ಎಲ್ಲರೂ ಕೊರಳಿಗೆ ಹಾಕಿಕೊಂಡು ಸಂಭ್ರಮಿಸುವುದು, ಪಂಚಮಿಯಂದು 'ಮೂಲ ಶಾಲ್ಮಲಿ' ಅಂದರೆ ಕೆಂಪು ವರ್ಣದ ಪುಷ್ಪಗಳಿಂದ ಕಂಗೊಳಿಸುವ 'ಶಾಲ್ಮಲಿ' ಅರ್ಥಾತ್ ಬೂರುಗದ ಮರದ ಕೆಳಗೆ ಹಾಡು ಹಸೆಗಳನ್ನು ಎಲ್ಲರೂ ಹೇಳುತ್ತಾ, ಕುಣಿ ಯುತ್ತಾ ಆಟಪಾಠಗಳನ್ನು ಮಾಡುವುದು. ಷಷ್ಟಿಯಂದು 'ಉದ್ಯಾನ ಯಾತ್ರ', ಅಂದು ಸಾಮೂಹಿಕವಾಗಿ ಹಾಡುತ್ತಾ, ಕುಣಿಯುತ್ತಾ ಉದ್ಯಾನಕ್ಕೆ ಹೋಗುವುದು, ನಂತರದ ದಿನಗಳಲ್ಲಿ 'ಉದಕಕ್ಷ್ವೇಡಣಿಕೋತ್ಸವ' ಅಂದರೆ ಬಣ್ಣದ ನೀರನ್ನು ಪರಸ್ಪರ 'ಶೃಂಗಕ'ಗಳಿಂದ ಅಂದರೆ ಪಿಚಕಾರಿ ಗಳಿಂದ ಎರಚಿಕೊಳ್ಳುವುದು ಹಾಗೂ 'ಸುವಸಂತಕ' ಅಂದರೆ ಬಣ್ಣಬಣ್ಣದ ಪುಡಿಗಳನ್ನು ಪರಸ್ಪರ ಎರಚಿಕೊಂಡು ಸಂಭ್ರಮಿಸುವುದು, ಅಷ್ಟಮಿ, ನವಮಿಗಳಲ್ಲಿ 'ಪಾಂಚಾಲಾ ನುಯಾನ' ಇದು ಜೋಡಿ ಗೊಂಬೆಗಳನ್ನು ಮದು ಮಕ್ಕಳಂತೆ ಸಿಂಗರಿಸಿ ಮೆರವಣಿಗೆ ಮಾಡುವುದು, ದಶಮಿ ಯಂದು 'ಡೋಲೋತ್ಸವ' ಅಂದರೆ ಉಯ್ಯಾಲೆಯಲ್ಲಿ, ಜೋಕಾಲಿಯಲ್ಲಿ ತರುಣಿಯರನ್ನು ಕೂರಿಸಿ ತರುಣರು ತೂಗಿ, ಜೀಕಿ ಆನಂದ ಪಡುವುದು, ದ್ವಾದಶಿಯಂದು 'ಹಿಂದೋಳೋತ್ಸವ' ಅಂದರೆ ಮಧುರ ಕಂಠದಿಂದ ಎಲ್ಲರೂ ವಸಂತ ರಾಗ ಹಾಗೂ ಹಿಂದೋಳ ರಾಗದಲ್ಲಿ ಹಾಡುವುದು, ತ್ರಯೋದಶಿ ಚತುರ್ದಶಿಗಳಲ್ಲಿ ಪುನಃ 'ಸಹಕಾರ ಭಂಜಿಕೋತ್ಸವ' ಎಲ್ಲರೂ ಮಾವಿನ ಮರಗಳ ಸುತ್ತಲೂ ಕುಣಿಯುತ್ತಾ, ನರ್ತಿಸುತ್ತಾ, ಒಮ್ಮೊಮ್ಮೆ ಜಿಗಿಯುತ್ತಾ, ಕಣ್ಣು ಮುಚ್ಚಿ, ಗುರಿ ಹಿಡಿದು, ಎಗರಿ ಎಗರಿ ಎಳೆಯ ಮಾವಿನ ಮಿಡಿಗಳನ್ನು ಬಾಯಿಯಿಂದಲೇ ಕಚ್ಚಿ ತಿನ್ನುವುದು, ಚತುರ್ದಶಿಯಂದು 'ಪ್ರತಿಮಾಲಾ' ಅಂದರೆ ಅಂತ್ಯಾಕ್ಷರಿ ಹಾಗೂ ನೃತ್ಯ ಪ್ರತಿಮಾಲಾ' ಅಂದರೆ ಒಬ್ಬರು ನೃತ್ಯ ಮಾಡಿ ಮುಗಿಸುವಾಗ ಯಾವ ಭಂಗಿಯಲ್ಲಿ ಮುಗಿಸಿರುತ್ತಾರೋ ಅದೇ ಭಂಗಿಯಿಂದ ಇನ್ನೊಬ್ಬರು ನೃತ್ಯ ಆರಂಭಿಸುವುದು, ಚೈತ್ರ ಶುದ್ಧ ಹುಣ್ಣಿಮೆಯಂದು ಅಂದರೆ ಚಿತ್ರ ಪೂರ್ಣಿಮೆಯಂದು 'ಮದನೋತ್ಸವ,' ಮನ್ಮಥನ ಪುನರುಜ್ಜೀವನದ ಸಂಭ್ರಮ, ಇದೇ 'ಕಾಮ ಜನನೋತ್ಸವ' ಹೀಗೆ ಕಾಮ ದಹನೋತ್ಸವದಿಂದ ಕಾಮ ಜನನೋತ್ಸವ ದವರೆಗೆ ವಸಂತೋತ್ಸವ 'ಯುಗಾದಿ'ಯು ಪ್ರಾಚೀನ ಭಾರತದಲ್ಲಿ ಸಾಮೂಹಿಕವಾಗಿ ಆಚರಿಸಲ್ಪಡುತ್ತಿತ್ತು ಎಂಬುದು ಪ್ರಾಚೀನ ಸಾಹಿತ್ಯ ಕಾವ್ಯಾದಿಗಳಿಂದ ತಿಳಿದುಬರುತ್ತದೆ. ವಿಶೇಷವೆಂದರೆ ಇದರಲ್ಲಿ ಜಾತಿ, ಮತ, ಲಿಂಗ, ಅಧಿಕಾರ, ಅಂತಸ್ತು, ಉಚ್ಚ, ನೀಚ, ಗಂಡು - ಹೆಣ್ಣು, ಹಿರಿಯ ಕಿರಿಯ ಎಂಬ ಭೇದವಿಲ್ಲದೇ ಸಾಮೂಹಿಕವಾಗಿ ಯಾವ ಖರ್ಚು-ವೆಚ್ಚಗಳೂ ಇಲ್ಲದೇ ಉತ್ಸಾಹ ಆನಂದಗಳಿಂದ ಸಂಭ್ರಮಿಸುವುದು ಆಗಿತ್ತು. ಈಗಲೂ ಸಹ ನಮ್ಮ ಪ್ರಾಚೀನ ಸಂಪ್ರದಾಯಗಳನ್ನು ಪಾಲಿಸಬೇಕೆನ್ನುವ ಸಂಸ್ಥೆ, ಸಂಘಟನೆಗಳು ಈ ರೀತಿಯಾದ ಯುಗಾದಿ ವಸಂತೋತ್ಸವವನ್ನು ಹಮ್ಮಿಕೊಳ್ಳಬಹುದು.



**ಪ್ರಾಚೀನ ಭಾರತದಲ್ಲಿ ಯುಗಾದಿ ವಸಂತೋತ್ಸವವು ಪ್ರಕೃತಿಯೊಂದಿಗೆ ಸಾಮೂಹಿಕವಾಗಿ ಸಂಭ್ರಮಿಸುವ ಉತ್ಸಾಹಾ ನಂದದ ಆಚರಣೆಯಾಗಿತ್ತು ಎಂಬುದು ಮಹಾಕಾವ್ಯಾದಿ ಸಾಹಿತ್ಯಗಳಿಂದ ತಿಳಿದುಬರುತ್ತದೆ.**

**- ಎಚ್. ಬಿ. ಮಂಜುನಾಥ,** ಹಿರಿಯ ಪತ್ರಕರ್ತರು.

# ಕರಾಮುವಿ: ಪದವಿ ಪರೀಕ್ಷೆಗಳು ಇಂದಿನಿಂದ ಪ್ರಾರಂಭ

ದಾವಣಗೆರೆ, ಏ.3- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ನಾತಕ (ಪೂರಕ ಪರೀಕ್ಷೆ) ಅಥವಾ ಸ್ನಾತಕೋತ್ತರ (ಜನವರಿ ಆವೃತ್ತಿ) ಪದವಿಗಳ ಮುಂದೂಡಲ್ಪಟ್ಟಿದ್ದ ವಾರ್ಷಿಕ ಪರೀಕ್ಷೆಗಳು ನಾಳೆ ದಿನಾಂಕ 4 ರಿಂದ 13 ರವರೆಗೆ ನಡೆಯಲಿವೆ. ಪರಿಷ್ಕೃತ ವೇಳಾಪಟ್ಟಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ ವೀಕ್ಷಿಸಬಹುದು ಅಥವಾ ಆನ್‌ಲೈನ್ ಸಹಾಯವಾಣಿ ಸಂಖ್ಯೆ: 8800335638ನ್ನು ಸಂಪರ್ಕಿಸಬಹುದು ಎಂದು ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ.

# ಹನುಮ ಜಯಂತಿ, ರಾಮನವಮಿ ಆಚರಣೆಗೆ ಮುಂದಾದ ಕಾಂಗ್ರೆಸ್

**(1ನೇ ಪುಟದಿಂದ)** ಹನುಮಾನ್ ಜಯಂತಿಗಳನ್ನು ಆಚರಿಸುವಂತೆ ತಿಳಿಸಲಾಗಿದೆ. ಈ ಹಬ್ಬಗಳ ಸಂದರ್ಭದಲ್ಲಿ ರಾಮಕಥಾ ಸಮಾರಂಭಗಳನ್ನು ಆಯೋಜಿಸಬೇಕು. ಹನುಮಾನ್ ಜಯಂತಿಯ ದಿನದಂದು ಸುಂದರಕಾಂಡ ಹಾಗೂ ಹನುಮಾನ್ ಚಾಲಿಸಾ ಪಠಿಸಬೇಕು ಎಂದು ತಿಳಿಸಲಾಗಿದೆ. ಹನುಮ ಜಯಂತಿಯ ಸಂದರ್ಭದಲ್ಲಿ ಕಮಲ್ ನಾಥ್ ಅವರು ತಮ್ಮ ತವರೂರಾದ ಚಿಂದ್ವಾರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಕೆ. ಮಿಶ್ರಾ, ಈ ರೀತಿಯ ಧಾರ್ಮಿಕ ಚಟುವಟಿಕೆ ನಡೆಸುತ್ತಿರುವುದು ಮೊದಲ ಬಾರಿಯೇನೂ ಅಲ್ಲ. ಕಮಲ್ ನಾಥ್ ಅವರು ಹನುಮಂತ ದೇವರ ಭಕ್ತರು. ಛಿಂದ್ವಾರದಲ್ಲಿ ಈ ಹಿಂದೆಯೂ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದ್ದು ಮಿಥ್ಯಾಚಾರ ಎಂದು ಹೇಳಿರುವ ಬಿಜೆಪಿ ವಕ್ತಾರ ಪಂಕಜ್ ಚತುರ್ವೇದಿ, ಕಾಂಗ್ರೆಸ್ ಓಲೈಕೆಯ ರಾಜಕೀಯ ಮಾಡುತ್ತಿದೆ ಎಂದು ಹೇಳಿದ್ದಾರೆ.

ರಾಮ ದೇವರು ಹಾಗೂ ರಾಮಸೇತುವೆ ಕಲ್ಪನಾತ್ಮಕ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸುವುದನ್ನು ಅವರು ವಿರೋಧಿಸಿದ್ದರು. ಕಾಂಗ್ರೆಸ್ ನಾಯಕರೊಬ್ಬರು ಹಿಂದೂಗಳನ್ನು ಐಸಿಸ್ ಹಾಗೂ ಬೋಕೋ ಹರಾಮ್ ಉಗ್ರರ ಜೊತೆ ಹೋಲಿಸಿದ್ದಾರೆ. ಈಗ ಮಿಥ್ಯಾಚಾರ ನಡೆಸಿ ಜನರ ದಾರಿ ತಪ್ಪಿಸಲಾಗದು ಎಂದಿದ್ದಾರೆ.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಬಸವರಾಜ್ ಹೊಸೂರು (BSNL)
ಜ್ಞಾಪಕಾರ್ಥವಾಗಿ ಪತ್ನಿ ಪುಷ್ಪ ಬಸವರಾಜ್ ಹಾವೇರಿ
ಪುಷ್ಪಾರ್ಪಣೆ ಸೇವಾ ಸಮಿತಿಯಿಂದ ಸೇವಾರ್ಥ.

ಸೈಟುಗಳು ಮಾರಾಟಕ್ಕಿವೆ
ಹೊಸ ಬನಶಂಕರಿ ಬಡಾವಣೆಯಲ್ಲಿ 35x50 ಉತ್ತರ ಪೂರ್ವ ಕಾರ್ನರ್, 30x50 ಪೂರ್ವ ದಕ್ಷಿಣ ಕಾರ್ನರ್, 40x50 ಉತ್ತರ ಪಶ್ಚಿಮ ಕಾರ್ನರ್, ಬಾಲಾಜಿ ಬಡಾವಣೆಯಲ್ಲಿ 30X50 ಉತ್ತರ ಪೂರ್ವ ಕಾರ್ನರ್
ಸ್ವಾಮಿ ಏಜೆಂಟ್ ವಿದ್ಯಾನಗರ
97421-44715

ಸೈಟುಗಳು ಮಾರಾಟಕ್ಕಿವೆ
ಬನಶಂಕರಿ ಬಡಾವಣೆಯಲ್ಲಿ 40x40 ಪೂರ್ವ, ಮಹಾಲಕ್ಷ್ಮಿ ಲೇಔಟ್‌ನಲ್ಲಿ 42x75 ಪೂರ್ವ, ಕುಂದುವಾಡ ಕೆರೆ ಹಿಂಭಾಗ 30x50, ಜಂಗಮ ಬಡಾವಣೆಯಲ್ಲಿ 30x40 ಉತ್ತರ, ನಂಜುಂಡಪ್ಪ ಬಡಾವಣೆಯಲ್ಲಿ 30x50 ಪಶ್ಚಿಮ ಅಳತೆಯ ಸೈಟುಗಳು ಮಾರಾಟಕ್ಕಿವೆ.
99866 17483, 78996 81386

ಸೈಟುಗಳು ಮಾರಾಟಕ್ಕಿವೆ
ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ 43x28 East, 30x50 South, 50x38 South, 30x53North, 30x60South, 30x60 Corner 40x60 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆಯ ರೀ ಪೇಂಟಿಂಗ್
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

ಬೇಕಾಗಿದ್ದಾರೆ
ಡೆಂಟಲ್ ಕ್ಲಿನಿಕ್‌ಗೆ ಎಸ್ಸೆಸ್ಸೆಲ್ಸಿ ಆಗಿರುವ ಹುಡುಗರು ಹುಡುಗಿಯರು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
72047 23987

ಗುಮಾಸ್ತರು ಬೇಕಾಗಿದ್ದಾರೆ
ಬಂಗಾರದ ಅಂಗಡಿಗೆ ಗುಮಾಸ್ತರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
98444 44772

ಸೈಟುಗಳು ಮಾರಾಟಕ್ಕಿವೆ
ಬನಶಂಕರಿ ಬಡಾವಣೆಯಲ್ಲಿ ಡಾಲರ್ಸ್ ಕಾಲೋನಿಯಲ್ಲಿ 70x63 Corner, 40x63 West, 30x50 West, 30x52 East, 40x74 East, 80x74 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆಗಳು ಮಾರಾಟಕ್ಕಿವೆ
40x30 East ಕೆಳಗಡೆ 2 ಬೆಡ್ ರೂಂ, ಮೇಲೆ 4 ಬೆಡ್‌ರೂಂ ಮನೆ, ಹೊಸಮನೆ ನೂತನ್ ಕಾಲೇಜ್ ಹಿಂಭಾಗ. 30x50 East, ಡುಪ್ಲೆಕ್ಸ್ ಮನೆ 4 ಬೆಡ್‌ರೂಂ ಮನೆ ವಿವೇಕಾನಂದ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆ ಮಾರಾಟಕ್ಕಿದೆ
20x60 ಅಳತೆಯಲ್ಲಿ ಎಂಸಿಸಿ ಬಿ ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
94496 84768
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಮನೆ ಬಾಡಿಗೆಗೆ ಇದೆ
ಶ್ರೀನಿವಾಸ ನಗರ 10 ನೇ ಕ್ರಾಸ್ 2 ನೇ ಫ್ಲೋರ್, 1 BHK ಮನೆ, 696/19 ಮಾತಾಪಿತೃ ಕೃಪ.
98800 68009

FLAT FOR LEASE
ವಿದ್ಯಾನಗರ ಕೊನೆ ಬಸ್‌ಸ್ಟಾಪ್ ನಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ 3BHK ಫ್ಲಾಟ್ ಲೀಸ್‌ಗೆ ಇದೆ. ಸಂಪರ್ಕಿಸಿ.
95913 60143

ಬೇಕಾಗಿದ್ದಾರೆ
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ :10,000
95352 43598, 08192 261003
99161 43003

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 70266 43088

ಮಳಿಗೆ ಬಾಡಿಗೆಗೆ ಇದೆ
ಮಾಮಾಸ್ ಜಾಯಿಂಟ್ ರೋಡ್,
ರೂಮ್ ಬಾಡಿಗೆಗೆ ಇದೆ
ಚಾಮರಾಜ ಪೇಟೆ
82177 72482

2BHK ಮನೆ ಬಾಡಿಗೆಗಿದೆ,
ಪೂರ್ವ ದಿಕ್ಕಿಗೆ ಬಾಗಿಲುಳ್ಳ, ಸುಸಜ್ಜಿತ 2 BHK, 1ನೇ ಮಹಡಿ ಮನೆ ತಿಮ್ಮಾರೆಡ್ಡಿ, ವಿಜ್ಞಾನ್, ನೂತನ್ ಹಾಗೂ ಬಿಐಇಟಿ ಕಾಲೇಜು ಹತ್ತಿರವಿದ್ದು, ಆಂಜನೇಯ ಬಡಾವಣೆ, 18 ನೇ ಕ್ರಾಸ್ ಇಲ್ಲಿ ಬಾಡಿಗೆಗಿದೆ.ಸಂಪರ್ಕಿಸಿ :
98452 16749, 95352 82899

ಮನೆ ಮಾರಾಟಕ್ಕಿದೆ
20x30 ಅಳತೆಯ ಪೂರ್ವ ದಿಕ್ಕಿನ Final Approved Ground and First Floor ಮನೆ ಮಾರಾಟಕ್ಕಿದೆ. Near Bagiratha Circle, Davanagere.
87470 61217

ನಾಯಿಗಳು ಮಾರಾಟಕ್ಕಿವೆ
1) ಬಾಕ್ಸರ್ 2) ರಾಟ್ ವಿಲ್ಲರ್ 3) ಡಾಲ್ ಮಿಷನ್ 4) ಡಾಬರ್ ಮನ್ 5) ಪಿಟ್ ಬುಲ್.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
93533 51046
94804 93942

ಬೇಕಾಗಿದ್ದಾರೆ
ಬಿನ್ನಿ ಕಂಪನಿ ರೋಡ್‌ನಲ್ಲಿರುವ ಮನೆಗೆ ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ.
M : 63631 97523

To let
Office space is available for rent ( 10 X 12) Suitable for Auditor, Driving school, computer service etc. Ground Floor, near Ram and Co circle, 5th Main, P. J. Exten.Davangere.
Contact Nanda Kumar
94816 72545.

ಬೇಕಾಗಿದ್ದಾರೆ
ವೆನ್‌ಸನ್ಸ್ ಕಾಫಿ ಕಂಪನಿಯಲ್ಲಿ ಕೆಲಸ ಮಾಡಲು ಹುಡುಗರು ಹಾಗೂ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ :
99864 54806
94493 55075

Dull in Maths
Junior Abacus
(UKG to 3rd std) Vedic Maths
(4th Std to 10th std)
Bruit Abacus and Vedic maths
Nijalingappa badavane
M : 9739066956

ಬೇಕಾಗಿದ್ದಾರೆ
ಯೂತ್ ಪಿ.ಟಿ ಅಸೋಸಿಯೇಷನ್ ಇಂಡಿಯಾ ಫಿಜಿಕಲ್ ಟೀಚರ್ ತರಬೇತಿ ಮೂರು ತಿಂಗಳು ಊಟ ವಸತಿಯೊಂದಿಗೆ ತರಬೇತಿ ಕೊಟ್ಟು ಕೆಲಸ ಕೊಡಲಾಗುತ್ತದೆ. 5 ಜಿಲ್ಲೆಗಳಲ್ಲಿ ತರಬೇತಿ ಕೊಡಲಾಗುತ್ತದೆ. ಹೊಸಪೇಟೆ ಜಿಲ್ಲೆ, ದಾವಣಗೆರೆ ಜಿಲ್ಲೆ, ಶಿವಮೊಗ್ಗ ಜಿಲ್ಲೆ, ಹಾವೇರಿ ಜಿಲ್ಲೆ, ಗದಗ ಜಿಲ್ಲೆ. ಆಸಕ್ತಿ ಉಳ್ಳವರು ಸಂಪರ್ಕಿಸಿ:
89043 05330, 93533 52805,
90668 35599

ಬೇಕಾಗಿದ್ದಾರೆ
ಕಂಪ್ಯೂಟರ್ ಬಿಲ್ಲಿಂಗ್ ಸೆಕ್ಷನ್ ನಲ್ಲಿ ಅನುಭವವುಳ್ಳ ಯುವಕ /ಯುವತಿಯರು ಬೇಕಾಗಿದ್ದಾರೆ. ಕೆಲಸದ ಸಮಯ ಬೆ: 8:00 ರಿಂದ ಸಂಜೆ 5:00 ರವರೆಗೆ ಎಸ್.ಎಸ್ ಸೂಪರ್ ಮಾರ್ಕೆಟ್ ಕಾಳಿಕಾದೇವಿ ಸರ್ಕಲ್ . ಹೈಟೆಕ್ ಹಾಸ್ಪಿಟೆಲ್ ರೋಡ್.ದಾವಣಗೆರೆ.
98441 07062

ಪಾಂಪ್ಲೆಟ್ಸ್ ಹಂಚಲು ಯುವಕ/ ಯುವತಿಯರು ಬೇಕಾಗಿದ್ದಾರೆ
ನೇರ ಪರೀಕ್ಷೆಗಳು SSLC , PUC ARTS / COMM / Sci. BA, B.Com,
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
ವಿಳಾಸ: ಶ್ರೀ ಗಂಗೋತ್ರಿ ಎಜು ಟ್ರಸ್ಟ್ (ರಿ). ಲಾಯರ್ ರೋಡ್. ದಾವಣಗೆರೆ
86602 35013

ಮನೆ ಬಾಡಿಗೆಗೆ ಇದೆ
1BHK 1st ಫ್ಲೋರ್ #515 ಬಸವೇಶ್ವರ ನಿಲಯ, ನಿಜಲಿಂಗಪ್ಪ ಲೇಔಟ್, ಅಮೃತ ವಿದ್ಯಾಲಯ ಸ್ಕೂಲ್ ಹತ್ತಿರ.
70192 55791
88928 48055

ಉಚಿತ ಥೆರಪಿ
15 ದಿನಗಳಲ್ಲಿ ಪರಿಹಾರ ಬಿಪಿ, ಶುಗರ್, ವೆರಿಕೋಸ್ ವೇನ್, ಬೆನ್ನು/ಸೊಂಟ/ಮಂಡಿ ನೋವು, ಗ್ಯಾಸ್ಟ್ರಿಕ್ ಇತರೆ ಯಾವುದೇ ಸಮಸ್ಯೆಗಳಿಗೆ ನೇರ ಪರಿಹಾರ. HOME DEMO ಸೌಲಭ್ಯ ವಿದೆ.T&C ಕಂಪ್ಯಾನಿಯೋ ಮೆಡಿಟೆಕ್, ಲಾಯರ್ ರೋಡ್, ದಾವಣಗೆರೆ.
86602 35013

ಮನೆ ಲೀಜ್ ಗೆ / ಬಾಡಿಗೆಗೆ ಇದೆ
ನಗರದ ಹೃದಯಭಾಗ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ನಲ್ಲಿ ಡಬಲ್ ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಇರುವ, ಪೂರ್ವ ಬಾಗಿಲುಳ್ಳ ಸುಸಜಿತ 2ನೇ ಮಹಡಿ, ಮನೆ ಲೀಸ್ ಗೆ /ಬಾಡಿಗೆಗೆ ಇದೆ. ಸಂಪರ್ಕಿಸಿ:
99022 99961, 73493 97287

ರಿಯಲ್ ಎಸ್ಟೇಟ್
ನಿಮ್ಮ ಸೈಟನ್ನು 1/2 ಪರ್ಸೆಂಟ್ ಕಮೀಷನ್‌ಗೆ. ಸಾಲ ಮಾಡಿಸುತ್ತೇವೆ.
63610 59489

For Rent
2BHK Corporation and bore well water (vegetarian only) #1949/17, Sindhu Nilaya, 19 th Cross, Vidyanagar New Police station road, Last Bus stop, Davanagere. 577005
99029 99359

WANTED
Need telecallers for banking products. Intrested candidates please contact us. it's only for ladies.
99649 98898
99649 98846

WANTED
Experienced Tally operator, Attractive salary, Full time job, only for Male
70190 73080

PROPERTY FOR SALE
ASHOKA ROAD, (20x45 Sq.Ft)
Buyers call directly.
84960 49983

ಉದ್ಯೋಗಾವಕಾಶ
ಯುವಕ/ಯುವತಿಯರಿಗೆ ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೇ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 10 ಸಾವಿರದಿಂದ 1 ಲಕ್ಷದವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ. ಸಂಪರ್ಕಿಸಿ
93435 46891, 70194 26891

ಆಸ್ತಿ ಖರೀದಿಸಿರುವ ಬಗ್ಗೆ
ನೀವು ಕ್ರಯಕ್ಕೆ ಖರೀದಿಸಿ ಮುಂಗಡ ಹಣ ನೀಡಿದ್ದರೂ ನಿಮ್ಮ ಹೆಸರಿಗೆ ಕ್ರಯಪತ್ರ ರಿಜಿಸ್ಟರ್ ಆಗಿರದ ಮನೆ, ಸೈಟು, ಜಮೀನುಗಳ ಬಗ್ಗೆ ಇರತಕ್ಕ ತಕರಾರನ್ನು ಪರಿಹರಿಸಿಕೊಳ್ಳಲು ಸಂಪರ್ಕಿಸಿರಿ
ಹೊನ್ನೂರಸ್ವಾಮಿ ವಾಂಜ್ರೆ
87926 04196

ಬೇಕಾಗಿದೆ
ಸಿಂಗಲ್ ರೂಂ ಬೇಕಾಗಿದೆ ವಿದ್ಯಾನಗರ, ಎಸ್.ಎಸ್. ಲೇಔಟ್ ಆಂಜನೇಯ ಬಡಾವಣೆ.
86181 82332

ವಾಣಿಜ್ಯ ಬಿಲ್ಡಿಂಗ್ ಬಾಡಿಗೆಗೆ
ದಾವಣಗೆರೆ ಕೆಇಬಿ ಬಡಾವಣೆ ನಾಯ್ಡು ಹೋಟೆಲ್ ಪಕ್ಕ 3 ಫ್ಲೋರ್ ಬಿಲ್ಡಿಂಗ್(6000 sq ft) ಸಿಂಗಲ್ ಬೆಡ್ ರೂಮ್, ಲಿಫ್ಟ್ ಸಹಿತ ವಾಣಿಜ್ಯ ಉಪಯೋಗಕ್ಕೆ ಬಾಡಿಗೆಗೆ ಇದೆ ಸಂಪರ್ಕಿಸಿ :
96207 59846

FOR RENT
1st Floor, size 26x50, TMP Complex, P.B.Road, (For Office & Bank)
88064 35868

Dentist Required
Required dentist on full time basis with attractive salary, intrested candidates can contact :
99005 83966

REQUIRED
Telecalling for ladies
Location: Davangere.
Contact:
8296376716

ಡಾ|| ಸೋಮಶೇಖರ್. ಎಸ್.ವಿ.
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಅರ್ಥರೈಟಿಸ್) ಬೆಂಗಳೂರು ಇವರು ದಿ. 06.04.2022ರ ಬುಧವಾರ ಮತ್ತು 07.04.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಪಿತ್ರಾರ್ಜಿತ / ಕುಟುಂಬದ ಆಸ್ತಿ
ನಿಮ್ಮ ಕುಟುಂಬದ ಪೂರ್ವಜರ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ನಿಮಗೆ ಬರಬೇಕಾಗಿರತಕ್ಕ ಪಾಲಿನ ಭಾಗ ಪಡೆಯಲು ಸಂಪರ್ಕಿಸಿರಿ :
ಹೊನ್ನೂರಸ್ವಾಮಿ ವಾಂಜ್ರೆ
87926 04196

ಡ್ರೈವರ್ ಬೇಕಾಗಿದ್ದಾರೆ
ಇನ್ನೋವಾ ಕಾರ್‌ಗೆ ಡ್ರೈವರ್ ಬೇಕಾಗಿದ್ದಾರೆ.
ತತ್‌ಕ್ಷಣವೇ ಸಂಪರ್ಕಿಸಿ
98447 16058

ಬೇಸಿಗೆ ಶಿಬಿರ
Basic knowledge, Handwriting, Drawing, Grammar and Spoken English.
ಸಿಂಚನ ಕೋಚಿಂಗ್ ಸೆಂಟರ್
opp. SBI ATM ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
85532 78258.

TO-LET
First Floor of 6200 Sq Ft (3100+3100) located at First floor of Global Honda Car Showroom complex,next to Sub Registrar office, near Vani Honda Two wheeler Show room, PB Road, Opp Sai International Hotel. Its prime location with two side roads.It belongs to me Contact no.
97317 05696, 94827 51297

15 ದಿನಗಳ ಕಾಶಿ ಪ್ರವಾಸ
ಕಾಶಿ, ಆಗ್ರಾ, ಮಥುರಾ, ಪ್ರಯಾಗರಾಜ, ವಾರಣಾಸಿ, ಹರಿದ್ವಾರ, ರಿಷಿಕೇಶ, ಗೀತಾ ಟ್ರಾವೆಲ್ಸ್, ದಾವಣಗೆರೆ.
(ರೈಲು, ವಿಮಾನದಲ್ಲಿ)
94481 62499
99455 34966

ಶ್ರೀ ಘುತ್ತರಕಿ ಭಾಗ್ಯಮ್ಮದೇವಿ ಜ್ಯೋತಿಷ್ಯಾಲಯ
ಶ್ರೀ ದತ್ತಾತ್ರೇಯ ಉಪಾಸಕರು ಪಂಡಿತ್ ಶ್ರೀ ಭರತ್ ಗುರೂಜಿ ಮನೆಯಲ್ಲಿ ಅಶಾಂತಿ, ಅನಾರೋಗ್ಯ, ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರು ಕಾಟ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲಕ್ಷ್ಮೀ ವಶ, ಭೂಮಿ ವಶ, ವಿದೇಶ ಪ್ರಯಾಣ, ಸಾಲದ ಬಾಧೆ ಇನ್ನೂ ನಿಮ್ಮ ಹಲವು ಸಮಸ್ಯೆಗಳಿಗೆ ಶೀಘ್ರ ಪರಿಹಾರ. ಫೋನಿನ ಮೂಲಕ ಸ್ವರ ಭವಿಷ್ಯದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ. ಇಂದೇ ಕರೆ ಮಾಡಿ
9980770791

ಮನೆ ಮಾರಾಟಕ್ಕಿದೆ
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೈಟುಗಳು ಮಾರಾಟಕ್ಕಿವೆ
1) ಹರಿಹರದಲ್ಲಿ ವಿನಾಯಕ ನಗರದ ಮುಂದುವರೆದ ಭಾಗದಲ್ಲಿ ಕೇವಲ ರೂ.625/- ಅಡಿಯಂತೆ.
2) ದಾವಣಗೆರೆಯ ಬನಶಂಕರಿ ಬಡಾವಣೆಯಲ್ಲಿ ಸಣ್ಣ ಅಳತೆಯ ಕಮರ್ಷಿಯಲ್ ಕಾರ್ನರ್ ಸೈಟ್ (ಒಟ್ಟು 1278 ಅಡಿಗಳು) ಮಾರಾಟಕ್ಕಿವೆ.
ಸಂಪರ್ಕಿಸಿ
Mohan Real Estate Agencies
Mob : 97424 34049

ಕನಸಿನ ಮನೆ ಮಾರಾಟಕ್ಕಿದೆ
ಹರಿಹರ ರಸ್ತೆ, ನೋಬಲ್ ಟಾರ್ಪಾಲಿನ್ ಎದುರು ಕುಂದುವಾಡ ರಸ್ತೆ / ರಶ್ಮಿ ಹಾಸ್ಟೆಲ್ ರಸ್ತೆಗೆ ಲಗತ್ತಾಗಿರತಕ್ಕ 30x42, ಡೋರ್ ನಂ.249, ಕನಸಿನ ಮನೆ, ಕೆಲ ಷರತ್ತಿನ ಮೇರೆಗೆ ಮಾರಾಟಕ್ಕಿದೆ.
ಸಂಪರ್ಕಿಸಿ: ಹೊನ್ನೂರಸ್ವಾಮಿ ವಾಂಜ್ರೆ
87926 04196

Sri Krishna Academy Of Vedic Culture
Presents
"Summer Vacation Camp"
for school children in Davangere
Age limit : 6-16 years. Hurry up
Limited seats. More Details:
9019377369

UPS BATTERY & RO PURIFIERS
Sales & Services
PEACE ENTERPRISES
83100 42490, 99013 18277
98801 56667

ಮನೆ ಬಾಡಿಗೆಗೆ
ಮೊದಲನೇ ಮಹಡಿಯಲ್ಲಿ 3 ಬೆಡ್ ರೂಂ ಉತ್ತರ ದಿಕ್ಕಿನ ಮನೆ, ಕಾರ್ಪೊರೇಷನ್ ಮತ್ತು ಬೋರ್ ನೀರಿನ ಸೌಲಭ್ಯವಿರುವ #5460/7, 7 ನೇ ಅಡ್ಡ ರಸ್ತೆ, ಸಿದ್ದವೀರಪ್ಪ ಬಡಾವಣೆ (ಸಸ್ಯಹಾರಿಗಳಿಗೆ ಮಾತ್ರ) ಮನೆ ಬಾಡಿಗೆಗೆ ಇದೆ.
91416 48691

ಹೆಬ್ಬೇವು ಮರಗಳು ಮಾರಾಟಕ್ಕಿವೆ
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

ಶಿಕ್ಷಕರು ಬೇಕಾಗಿದ್ದಾರೆ
ಶ್ರೀ ಗುರುಕುಲ ವಿದ್ಯಾಸಂಸ್ಥೆ, ಸಿ.ಬಿ.ಎಸ್.ಇ ಶಾಲೆ, ತುರ್ಚಘಟ್ಟ. ಗಣಿತ, ವಿಜ್ಞಾನ, ಇಂಗ್ಲಿಷ್, ಗಣಕಯಂತ್ರ ವಿಷಯದಲ್ಲಿ ಪರಿಣತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿ ಇರುವವರು, ಈ ನಂಬರ್‌ಗೆ ಸಂಪರ್ಕಿಸಿ.
73386 04513, 73386 04512

SUMMER TUITIONS
FOR SSLC/ PCMB / COMM /ARTS/
100 % Results With solved notes.
SINCHANA ACADEMY
Near RAM & Co Circle, Davangere
90195 80600
85532 78258

# ಹರಿಹರೇಶ್ವರ ದೇವಾಲಯದಲ್ಲಿ ಡಿಸಿ ಪೂಜೆ

(1ನೇ ಪುಟದಿಂದ) ಸಮಯದಲ್ಲಿ ರೈತರು ತಮ್ಮ ಕಾರ್ಯ ಚಟುವಟಿಕೆಗಳನ್ನು ಆರಂಭಿಸುವುದರಿಂದ ಅವರ ಬದುಕು ಹಸನಾಗುವ ದೃಷ್ಟಿಯಿಂದ, ಇವತ್ತಿನ ದಿನವನ್ನು ಸರ್ಕಾರ ರೈತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದರಿಂದ ರೈತರಿಗೆ ಇನ್ನಷ್ಟು ಬಲ ಬಂದತಾಗಿದೆ ಮತ್ತು ಜಿಲ್ಲೆಯ ಎಲ್ಲಾ ರೈತರ ಬದುಕು ಉತ್ತಮ ದಾರಿಯತ್ತ ಸಾಗಲಿ ಎಂದು ಆಶಿಸಿದರು. ಅಮರಾವತಿ ಗ್ರಾಮದ ರೈತರು ರಾಗಿ ಖರೀದಿ ಕೇಂದ್ರ ಪ್ರಾರಂಭಿಸಲು ಮನವಿ ಮಾಡಿಕೊಂಡಿದ್ದರು. ನಾವು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ರಾಜ್ಯ ಸರ್ಕಾರ ಕೂಡ ಕೇಂದ್ರ ಸರ್ಕಾರಕ್ಕೆ ಕಳಿಸಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶಾಸಕ ಎಸ್. ರಾಮಪ್ಪ ಮಾತನಾಡಿ, ಇತ್ತೀಚೆಗೆ ನಡೆದ ಅಧಿವೇಶನದಲ್ಲಿ ರಾಗಿ ಖರೀದಿ ಕೇಂದ್ರ ತೆರೆಯಲು ತಿಳಿಸಲಾಗಿದೆ. ರಾಜ್ಯ ಸರ್ಕಾರ ಬೇಗನೆ ರಾಗಿ ಖರೀದಿ ಕೇಂದ್ರ ತೆರೆಯಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ರೈತ ಮುಖಂಡರಾದ ಎಪಿಎಂಸಿ ಮಾಜಿ ನಿರ್ದೇಶಕ ಹೆಚ್. ನಾಗರಾಜ್, ಹೆಚ್. ಪಾಲಾಕ್ಷಪ್ಪ, ಜೆಟ್ಟೆಪ್ಪ ಮಾತನಾಡಿ, ರಾಗಿ ಬೆಳೆಗೆ ಮಾರುಕಟ್ಟೆಯಲ್ಲಿ 1900 ರೂ.ಗೆ ಖರೀದಿ ಮಾಡುತ್ತಿದ್ದಾರೆ. ಸರ್ಕಾರದ ಖರೀದಿ ಕೇಂದ್ರದಲ್ಲಿ 3377 ರೂ.ಗೆ ಖರೀದಿ ಮಾಡುತ್ತದೆ. ಆದರೆ ರಾಗಿ ಖರೀದಿ ಕೇಂದ್ರ ಜನವರಿ 22 ರಂದು ಸ್ಥಗಿತವಾಯಿತು. ಕೂಡಲೇ ರಾಗಿ ಖರೀದಿ ಕೇಂದ್ರವನ್ನು ಸ್ಥಾಪಿಸಲು ರೈತರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ಎಪಿಎಂಸಿ ಮಾಜಿ ನಿರ್ದೇಶಕ ಹೆಚ್. ನಾಗರಾಜ್, ಹೆಚ್. ಜಟ್ಟೆಪ್ಪ, ಹೆಚ್.ಬಿ. ನಾಗರಾಜ್, ಹೆಚ್.ಎಂ. ರಾಜಕುಮಾರ್, ಕರೂರು ಮಲ್ಲಿಕಾರ್ಜುನ, ಗೌಡ್ರು ಸುರೇಶ್, ತಿರುಕಪ್ಪ, ಹಂಚಿನಮನೆ ಸಿದ್ದಪ್ಪ, ಬೆಟ್ಟಪ್ಪರ ಮಲ್ಲೇಶಪ್ಪ, ಎ.ಬಿ. ಬಸವರಾಜ್, ಸಿರಿಗೆರೆ ಉಮಾಕಾಂತ್, ಎಸ್. ಶಿವಪ್ಪ, ಹೆಚ್.ಪಾಲಾಕ್ಷಪ್ಪ, ಕೆ. ಚೆನ್ನಪ್ಪ, ಕೆ. ಹೊನ್ನಪ್ಪ, ಕೆ. ಗೌಡಪ್ಪ, ಹೆಚ್.ಎಂ. ಸುರೇಶ್, ಹೆಚ್. ಉಜ್ಜಪ್ಪ, ಶಿವಮೂರ್ತಿ, ಹೆಚ್. ಮಲ್ಲಿಕಾರ್ಜುನ, ಗೌಡ್ರು ಲಿಂಗರಾಜ್, ನವೀನ, ಕೆ.ಹೆಚ್. ಹನುಮಂತಪ್ಪ ಶಿಕ್ಷಕ, ಅಜ್ಜಪ್ಪ, ಚಂದ್ರಪ್ಪ, ಭರತ್ ಹಾಗೂ ಇತರರು ಹಾಜರಿದ್ದರು.

# 5 ಕೋ. ಮೌಲ್ಯದ ಪಾಲಿಕೆ ಜಾಗ ಕಬಳಿಸಲು ಬಿಜೆಪಿ ಸಂಚು

## ನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಆರೋಪ

ದಾವಣಗೆರೆ, ಏ.3- ನಾಗರಿಕರ ಹಿತರಕ್ಷಣೆಗಾಗಿ ಮೀಸಲಿಟ್ಟಿದ್ದ ನಗರ ಪಾಲಿಕೆಗೆ ಸೇರಿದ 25 ಕೋಟಿ ರೂ. ಮೌಲ್ಯದ ನಿವೇಶನವನ್ನು ಜಿಲ್ಲಾ ಬಿಜೆಪಿ ಕಾರ್ಯಾಲಯಕ್ಕೆ ಮಂಜೂರು ಮಾಡಿಸಿಕೊಂಡು ಜಾಗ ಕಬಳಿಸಲು ಬಿಜೆಪಿಯವರು ತೆರೆಮರೆ ಕಸರತ್ತು ನಡೆಸುತ್ತಿದ್ದು, ಇದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದು ನಗರ ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಸ್ಪಷ್ಟಪಡಿಸಿದ್ದಾರೆ.

ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿ ಪಾಲಿಕೆಗೆ ಸೇರಿದ ನಿವೇಶನ 3681/10, 3681/10ಎ, 3681/11 ಹಾಗೂ 3681/12 ಅಡಿ ನಿವೇಶನ ಇದ್ದು, ಇದರ ಒಟ್ಟು ಮೌಲ್ಯ 25 ಕೋಟಿಗಳಾಗಿವೆ. ಈ ನಿವೇಶನದಲ್ಲಿ ಈ ಭಾಗದ ನಾಗರಿಕರಿಗಾಗಿ ಒಳಾಂಗಣ ಕ್ರೀಡಾಂಗಣ, ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿ ಪಾಲಿಕೆಗೆ ಆದಾಯ ಬರುವಂತೆ ಕ್ರಮ ಕೈಗೊಳ್ಳಲು ನಗರ ಪಾಲಿಕೆಯ ಆಡಳಿತ ವರ್ಗಕ್ಕೆ ಈ ಭಾಗದ ನಾಗರಿಕರು, ಹಿತರಕ್ಷಣಾ ಸಮಿತಿಯವರು ಹಾಗೂ ಕ್ರೀಡಾಪಟುಗಳ ಜೊತೆ ಸೇರಿ ಮನವಿ ನೀಡಿ ಒತ್ತಾಯ ಮಾಡಿದ್ದೇವೆ. ಇತ್ತೀಚೆಗೆ ಶಾಸಕ ಎಸ್.ಎ. ರವಿಂದ್ರನಾಥ್ ಅವರೂ ಸಹ ಸ್ಪಂದಿಸಿ, ಈ ನಿವೇಶನವನ್ನು ನಾಗರಿಕರ ಉಪಯೋಗಕ್ಕೆ ನೀಡುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದ್ದರು ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಜಿಲ್ಲಾ ಬಿಜೆಪಿ ಕಾರ್ಯಾಲಯಕ್ಕೆ ಜಾಗ ಮಂಜೂರಾತಿ ಮಾಡುವಂತೆ ಅಧ್ಯಕ್ಷ ವೀರೇಶ್ ಹನಗವಾಡಿ ಮನವಿ ಪತ್ರ ನೀಡಿದ್ದು, ಪಾಲಿಕೆ ಆಯುಕ್ತರು ನಮ್ಮ ಗಮನಕ್ಕೆ ತಂದಿಲ್ಲ. ಜಾಗ ಕಬಳಿಸಲು ಸದ್ದಿಲ್ಲದೇ ಬಿಜೆಪಿಯವರು ಕಸರತ್ತು ನಡೆಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ಇದಕ್ಕೆ ಇವು ಅವಕಾಶವನ್ನು ಕೊಡುವುದಿಲ್ಲ. 'ನಮ್ಮ ಜಾಗ ನಮ್ಮ ಹಕ್ಕು' ಘೋಷ ವಾಕ್ಯದೊಂದಿಗೆ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ಈ ವಿಚಾರವಾಗಿ ನ್ಯಾಯಾಲಯದ ಮೊರೆ ಹೋಗಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸಾರ್ವಜನಿಕ ಹಿತಾಸಕ್ತಿಯಡಿ ದಾವೆ ಹೂಡುತ್ತೇವೆ ಎಂದರು.

2023 ರ ಚುನಾವಣೆಯಲ್ಲಿ ಸೋಲು ಖಚಿತ ಎಂಬ ಕಾರಣಕ್ಕಾಗಿ ಆರ್‌ಎಸ್‌ಎಸ್‌ನವರು ಹಿಜಾಬ್ ಆಯಿತು, ಈಗ ಹಲಾಲ್ ಮತ್ತು ಜಟ್ಕಾ ಕಟ್ ಈ ರೀತಿಯ ಸರಣಿಗಳನ್ನು ಬಿಡುವ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ. ದಾವಣಗೆರೆ ಪಾಲಿಕೆಯಲ್ಲಿಯೂ ಕೂಡ ದುರಾಡಳಿತದಿಂದ ಅಧಿಕಾರ ಹಿಡಿದು ಭ್ರಷ್ಟಾಚಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಪಾಲಿಕೆ ಸದಸ್ಯ ಕೆ. ಚಮನ್ ಸಾಬ್ ಮಾತನಾಡಿ, ಬೆಲೆ ಏರಿಕೆಯ ವೈಫಲ್ಯ ಮುಚ್ಚಲು ಹಿಜಾಬ್, ಹಲಾಲ್, ಜಟ್ಕಾ ಕಟ್ ವಿಚಾರಗಳನ್ನು ಜನರ ಮುಂದಿಡುತ್ತಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಎ. ನಾಗರಾಜ್, ಗಣೇಶ್ ಹುಲ್ಮನಿ ಇದ್ದರು.

# ನಾಯಕ ವಿದ್ಯಾರ್ಥಿ ನಿಲಯದಲ್ಲಿ ಪುಣ್ಯಾನಂದಪುರಿ ಶ್ರೀಗಳ ಪುಣ್ಯಾರಾಧನೆ




ದಾವಣಗೆರೆ, ಮಾ.3- ಶ್ರೀ ವಾಲ್ಮೀಕಿ ಗುರುಪೀಠದ ಪ್ರಥಮ ಪೀಠಾಧಿಪತಿ ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳವರ 15ನೇ ವರ್ಷದ ಪುಣ್ಯಾರಾಧನೆ ಯನ್ನು ನಗರದ ನಾಯಕ ವಿದ್ಯಾರ್ಥಿ ನಿಲಯದಲ್ಲಿ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ. ವೀರಣ್ಣ ಅವರು ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್, ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್ ಚಂದ್ರ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಾಯಕ ವಿದ್ಯಾರ್ಥಿ ನಿಲಯದ ನಿರ್ದೇಶಕರುಗಳಾದ ಎನ್.ಎಂ. ಆಂಜನೇಯ ಗುರೂಜಿ, ಶ್ಯಾಗಲೆ ಮಂಜುನಾಥ್, ನರಸಿಂಹಯ್ಯ ಎಂ.ಬಿ ಕೇರಿ, ಎಸ್.ಕೆ ಸ್ವಾಮಿ, ಪರಮೇಶ್ ಪುಟ್ಟಣ್ಣನವರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ರಾಜ್ಯಗಳ ಜನಪ್ರಿಯ ಯೋಜನೆಗಳಿಂದ ಭಾರತಕ್ಕೆ ಶ್ರೀಲಂಕಾ ಪರಿಸ್ಥಿತಿ

## ಪ್ರಧಾನಿ ಕರೆದಿದ್ದ ಸಭೆಯಲ್ಲಿ ಅಧಿಕಾರಿಗಳ ಕಳವಳ

ನವದೆಹಲಿ, ಏ. 3 – ಹಲವಾರು ರಾಜ್ಯಗಳು ಜಾರಿಗೆ ತರುತ್ತಿರುವ ಜನಪ್ರಿಯ ಯೋಜನೆಗಳು ಆರ್ಥಿಕ ಹೊರೆಯಾಗಿವೆ. ಇದರಿಂದಾಗಿ ಭಾರತ ಸಹ ಶ್ರೀಲಂಕಾ ಹಾದಿಗೆ ಹೋಗಬಹುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆದಿದ್ದ ಸಭೆಯಲ್ಲಿ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರು ತಮ್ಮ ಕಚೇರಿಯಲ್ಲಿ ಶನಿವಾರ ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳ ಸಭೆ ಕರೆದಿದ್ದರು. ನಾಲ್ಕು ಗಂಟೆ ಕಾಲ ಈ ಸಭೆ ನಡೆದಿತ್ತು.

ಸಭೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಪ್ರಧಾನ ಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರ ಮತ್ತು ಸಂಪುಟ ಕಾರ್ಯದರ್ಶಿ ರಾಜೀವ್ ಗೌಬ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, ಅಧಿಕಾರಿಗಳು ಕೊರತೆಯ ನಿರ್ವಹಣೆಯ ಮನೋಭಾವದಿಂದ ಹೊರ ಬರಬೇಕು. ಹೆಚ್ಚುವರಿ ಪೂರೈಕೆಯ ಹೊಸ ಸವಾಲುಗಳನ್ನು ಎದುರಿಸಬೇಕು. ಬಡತನದ ಹಳೆಯ ಕಥೆ ಹೇಳಿ ಪ್ರಮುಖ ಅಭಿವೃದ್ಧಿ ಕಾರ್ಯಗಳನ್ನು ಬಿಡಬಾರದು ಎಂದು ಹೇಳಿದರು.

ಈ ಸಂದರ್ಭದಲ್ಲಿ 20ಕ್ಕೂ ಹೆಚ್ಚು ಅಧಿಕಾರಿಗಳು ಪ್ರಧಾನ ಮಂತ್ರಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು ಎಂದು ಮೂಲಗಳು ಹೇಳಿವೆ.

ಇತ್ತೀಚಿನ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ರಾಜ್ಯವೊಂದರಲ್ಲಿ ಘೋಷಿಸಲಾದ ಜನಪ್ರಿಯ ಯೋಜನೆಗಳ ಬಗ್ಗೆ ಇಬ್ಬರು ಕಾರ್ಯದರ್ಶಿಗಳು ಮಾತನಾಡಿದ್ದಾರೆ.

ಅದೇ ರೀತಿ ಕೆಲ ರಾಜ್ಯಗಳಲ್ಲಿರುವ ಯೋಜನೆಗಳು ಆರ್ಥಿಕವಾಗಿ ಸುಸ್ಥಿರವಲ್ಲ. ಭಾರತ ಸಹ ಶ್ರೀಲಂಕಾ ಹಾದಿಗೆ ಸಾಗಬಹುದು ಎಂದು ತಿಳಿಸಿದರು ಎಂದು ಮೂಲಗಳು ಹೇಳಿವೆ.

ಶ್ರೀಲಂಕಾ ಪ್ರಸಕ್ತ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದೆ. ಆರ್ಥಿಕ ಪರಿಸ್ಥಿತಿ ಹದಗೆಡಲು ಸುದೀರ್ಘ ಕಾಲದ ಜನಪ್ರಿಯ ಯೋಜನೆಗಳೂ ಸಹ ಕಾರಣವಾಗಿವೆ.

# ಜಿಲ್ಲಾ ವಾಲ್ಮೀಕಿ ಸಮಾಜದಿಂದ ಬೆಂಬಲ




ದಾವಣಗೆರೆ,ಏ.3- ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಮೀಸಲಾತಿ ಹೆಚ್ಚಳ ಮಾಡುವಂತೆ ನಡೆಸುತ್ತಿರುವ 50ನೇ ದಿನದ ಧರಣಿ ಸತ್ಯಾಗ್ರಹದಲ್ಲಿ ಜಿಲ್ಲಾ ನಾಯಕ ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ಬಿ.ವೀರಣ್ಣ, ಹಿರಿಯ ವಕೀಲ ಎನ್.ಎಂ ಆಂಜನೇಯ ಗುರೂಜಿ, ಹೊದಿಗೆರೆ ರಮೇಶ್, ಪರಸಪ್ಪ, ನರಸಿಂಹಯ್ಯ, ಎಂ.ಕೇರಿ.ಸುನೀಲ್, ಯೋಗೀಶ್ ಮಾಯಕೊಂಡ, ಆರ್. ಬಸವರಾಜ್, ಪ್ರಸಾದ ಪಚ್ಚಿ ನಿಟ್ಟುವಳ್ಳಿ, ಜ್ಞಾನೇಶ್ ಮತ್ತಿತರರು ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಿದರು.

# ಚಂದ್ರ ದರ್ಶನ ಮಾಡಿದ ಕಾಗಿನೆಲೆ ಶ್ರೀ



ಕಾಗಿನೆಲೆ ಗುರುಪೀಠದ ಬೆಳ್ಳೂಡಿ ಶಾಖಾ ಮಠದಲ್ಲಿ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಭಾನುವಾರ ಸಂಜೆ ಚಂದ್ರ ದರ್ಶನಕ್ಕಾಗಿ ಮೋಡದಲ್ಲಿ ಹುಡುಕಾಟ ನಡೆಸಿದ ಸ್ವಲ್ಪ ಹೊತ್ತಿನಲ್ಲಿಯೇ ಚಂದ್ರ ದರ್ಶನ ಆಯಿತು .

# ಪಾಕಿಸ್ತಾನದಲ್ಲಿ ರಾಜಕೀಯ ಅತಂತ್ರ



## ಹಠಾತ್ತನೆ ಶಾಸನಸಭೆ ವಿಸರ್ಜಿಸಿದ ಪ್ರಧಾನಿ ಖಾನ್

ಇಸ್ಲಮಾಬಾದ್, ಏ. 3 – ಪ್ರತಿಪಕ್ಷಗಳು ಮಂಡಿಸಿದ ಅವಿಶ್ವಾಸ ನಿಲುವಳಿಯಿಂದ ಹಿನ್ನಡೆ ಕಂಡಿದ್ದ ಪಾಕಿಸ್ತಾನದ ಪ್ರಧಾನ ಮಂತ್ರಿ ಇಮ್ರಾನ್ ಖಾನ್, ಶಾಸನ ಸಭೆಯನ್ನು ವಿಸರ್ಜಿಸುವ ಮೂಲಕ ತಿರುಗೇಟು ನೀಡಿದ್ದಾರೆ.

ಇಮ್ರಾನ್ ಖಾನ್ ಕ್ರಮ ಸಂವಿಧಾನ ಬಾಹಿರ ಎಂದಿರುವ ಪ್ರತಿಪಕ್ಷಗಳು, ಸುಪ್ರೀಂ ಕೋರ್ಟ್ ಮೊರೆ ಹೋಗಿವೆ. ಸುಪ್ರೀಂ ಕೋರ್ಟ್ ಈ ವಿಷಯವನ್ನು ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡಿದೆ. ಇದರಿಂದಾಗಿ ಪಾಕಿಸ್ತಾನ ಇನ್ನೊಮ್ಮೆ ಸಂವಿಧಾನಿಕ ಹಾಗೂ ರಾಜಕೀಯ ಬಿಕ್ಕಟ್ಟಿಗೆ ಸಿಲುಕಿದೆ

ಬೆಂಬಲ ಕಳೆದುಕೊಂಡಿದ್ದ ಖಾನ್, ರಾಷ್ಟ್ರೀಯ ಸದನದಲ್ಲಿ ಅವಿಶ್ವಾಸ ನಿಲುವಳಿಗೆ ಸೋಲು ಕಾಣುವುದು ಸ್ಪಷ್ಟವಾಗಿತ್ತು. ಆದರೆ, ಅಚ್ಚರಿಯ ಬೆಳವಣಿಗೆಯಲ್ಲಿ ಉಪಸಭಾಧ್ಯಕ್ಷ ಕಾಸಿಮ್ ಸುರಿ ಅವರು ಪ್ರತಿಪಕ್ಷಗಳ ಅವಿಶ್ವಾಸ ನಿಲುವಳಿ ಸಂವಿಧಾನ ಬಾಹಿರ ಎಂದು ತಳ್ಳಿ ಹಾಕಿದರು. ನಂತರ ಖಾನ್ ಸದನವನ್ನು ವಿಸರ್ಜಿಸಿದ್ದಾರೆ.

ಈ ಬೆಳವಣಿಗೆಗಳ ನಂತರ ದೇಶವನ್ನು ಉದ್ದೇಶಿಸಿ ಮಾತನಾಡಿರುವ ಖಾನ್, ಸರ್ಕಾರ ಬದಲಿಸುವ ಹಾಗೂ ವಿದೇಶಿ ಸಂಚಿನ ಯತ್ನವನ್ನು ಉಪಾಧ್ಯಕ್ಷರು ತಿರಸ್ಕರಿಸಿದ್ದಾರೆ. ದೇಶ ಹೊಸ ಚುನಾವಣೆಗೆ ಸಿದ್ಧವಾಗಲಿದೆ ಎಂದಿದ್ದಾರೆ. ಅವಿಶ್ವಾಸ ನಿಲುವಳಿ ತಿರಸ್ಕೃತಗೊಂಡ ನಂತರ ಸದನ ವಿಸರ್ಜಿಸಲು ಅಧ್ಯಕ್ಷ ಆರಿಫ್ ಅಲ್ವಿ ಅವರಿಗೆ ಖಾನ್ ಶಿಫಾರಸ್ಸು ಕಳಿಸಿದ್ದರು. ನಂತರ ಅಲ್ವಿ ಪ್ರಧಾನಿ ಸಲಹೆಯನ್ನು ಅಂಗೀಕರಿ ಸಿದ್ದಾರೆ.

ಪಾಕಿಸ್ತಾನದ ಯಾವುದೇ ಪ್ರಧಾನಿ ತಮ್ಮ ನಿಗದಿತ ಪೂರ್ಣ ಐದು ವರ್ಷಕ್ಕೆ ಆಡಳಿತ ನಡೆಸಲು ಸಾಧ್ಯವಾಗಿಲ್ಲ.

ಅವಿಶ್ವಾಸ ನಿಲುವಳಿ ತಿರಸ್ಕರಿಸಿರುವುದು ಸಂವಿಧಾನ ಬಾಹಿರ ಎಂದು ಆರೋಪಿಸಿದ ಪ್ರತಿಪಕ್ಷಗಳು, ಶಾಸನ ಸಭೆಯಲ್ಲಿ ಪ್ರತಿಭಟನೆ ನಡೆಸಿದ್ದರು.

# ತೈಲ ಬೆಲೆ ಏರಿಕೆ ವಿರೋಧಿಸಿ ನಗರದಲ್ಲಿ ಇಂದು ಕಾಂಗ್ರೆಸ್ ಪ್ರತಿಭಟನೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತು ಔಷಧಿ ದರ ಏರಿಕೆಯನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರುಗಳ ನೇತೃತ್ವದಲ್ಲಿ ಇಂದು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11 ಕ್ಕೆ ಜಯದೇವ ವೃತ್ತದಿಂದ ಮೆರವಣಿಗೆ ಆರಂಭಗೊಳ್ಳಲಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

# ನವಜಾತ ಶಿಶು ಕಳವು ಪ್ರಕರಣದ ಅಹೋರಾತ್ರಿ ಧರಣಿ ತಾತ್ಕಾಲಿಕ ಹಿಂಪಡೆ

ದಾವಣಗೆರೆ, ಏ.3- ನಗರದ ನಗರದ ಹಳೇ ಸರ್ಕಾರಿ ಮಹಿಳಾ ಹೆರಿಗೆ ಆಸ್ಪತ್ರೆಯಲ್ಲಿ ಕಳೆದ 15 ದಿನಗಳ ಹಿಂದೆ ನವಜಾತ ಶಿಶು ಕಳುವಾಗಿರುವ ಪ್ರಕರಣ ಖಂಡಿಸಿ ಪ್ರಗತಿಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ನಡೆಸಲಾಗುತ್ತಿದ್ದ ಅಹೋರಾತ್ರಿ ಧರಣಿಯನ್ನು ಇಂದು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ.

**ಗಡುವು:** ಹೆರಿಗೆ ಆಸ್ಪತ್ರೆ ಮುಂಭಾಗದಲ್ಲಿ ಮಗುವಿನ ಪೋಷಕರ ಸಹಿತ ಕಳೆದ 10 ದಿನಗಳಿಂದ ಹೋರಾಟ ನಡೆಸಲಾಗುತ್ತಿತ್ತು. ಇಂದಿಗೆ ಅಹೋರಾತ್ರಿ ಧರಣಿಯು 5ನೇ ದಿನಕ್ಕೆ ಕಾಲಿಟ್ಟಿತ್ತು. ಕಳೆದ 15 ದಿನಗಳ ಈ ಪ್ರಕರಣ ಇತ್ಯರ್ಥ ಹಾಗೂ ಮಗುವಿನ ಪತ್ತೆ ವಿಚಾರವಾಗಿ ಸ್ಥಳಕ್ಕೆ ಜಿಲ್ಲಾ ರಕ್ಷಣಾಧಿಕಾರಿಗಳು ಆಗಮಿಸುವಂತೆ ಧರಣಿ ನಿರತರು ಬಿಗಿಪಟ್ಟು ಹಿಡಿದಿದ್ದರು. ಸಂಜೆ ನಗರ ಡಿವೈಎಸ್ಪಿ ಗುರುಬಸವರಾಜ್ ಅವರು ಧರಣಿ ನಿರತ ಸ್ಥಳಕ್ಕಾಗಮಿಸಿ ಮಗುವಿನ ಪೋಷಕರಿಗೆ ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರುಗಳೊಂದಿಗೆ ಮಾತನಾಡಿ ಹೋರಾಟ ಕೈ ಬಿಡುವಂತೆ ಮನವೊಲಿಸಿದ್ದಾರೆ.

ಈಗಾಗಲೇ ನವಜಾತ ಶಿಶುವಿನ ಪತ್ತೆ ಕಾರ್ಯ ಮುಂದುವರೆದಿದ್ದು, ಸಿಸಿ ಕ್ಯಾಮರಾದಲ್ಲಿ ಸೆರೆ ಸಿಕ್ಕಿರುವ ಮಗುವನ್ನು ಎತ್ತಿಕೊಂಡು ಹೋಗುವ ದೃಶ್ಯಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಯುತ್ತಿದ್ದು, ಬೆಂಗಳೂರಿನಿಂದ ತಾಂತ್ರಿಕ ತಜ್ಞರನ್ನು ಕರೆಸಿ, ತನಿಖೆ ನಡೆಸಲಾಗುತ್ತಿದೆ. ಅತಿ ಶೀಘ್ರದಲ್ಲಿ ಮಗುವನ್ನು ಹುಡುಕಿ ಕೊಡುವ ದೃಢ ಭರವಸೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಪ್ರತಿನಿಧಿಯಾಗಿ ಆಗಮಿಸಿದ್ದ ಡಿವೈಎಸ್ಪಿ ಗುರುಬಸವರಾಜ್ ನೀಡಿದ್ದಾರೆ. ಇದಕ್ಕಾಗಿ 10 ದಿನಗಳ ಕಾಲಾವಕಾಶ ಕೇಳಿದ್ದು, ಅಲ್ಲಿಯ ತನಕ ಗಡುವು ನೀಡಲಾಗಿದೆ ಎಂದು ಜೆಡಿಎಸ್‌ನ ಜಿಲ್ಲಾ ಮಹಾ ಪ್ರಧಾನ ಕಾರ್ಯದರ್ಶಿ ಜೆ. ಅಮಾನುಲ್ಲಾ ಖಾನ್ ತಿಳಿಸಿದ್ದಾರೆ.

ಸ್ಥಳದಲ್ಲಿದ್ದ ಕಾರ್ಮಿಕ ಮುಖಂಡ ಕಾಂ. ಉಮೇಶ್ ಅವರು ಹೋರಾಟಗಾರರಿಗೆ ಹಾಗೂ ಶಿಶುವಿನ ಕುಟುಂಬಸ್ಥರಿಗೆ ಸಮಜಾಯಿಷಿ ಹೇಳಿದ ಕಾರಣ ಅಹೋರಾತ್ರಿ ಧರಣಿ ಹಿಂದಕ್ಕೆ ಪಡೆಯಲಾಗಿದೆ ಎಂದು ಟಿ. ಅಸ್ಗರ್ ಹೇಳಿದ್ದಾರೆ.

ಈ ವೇಳೆ ಮಗುವಿನ ಪೋಷಕರಾದ ಉಮೇಸಲ್ಮಾ, ಇಸ್ಮಾಯಿಲ್ ಜಬೀವುಲ್ಲಾ, ಎಂ. ಕರಿಬಸಪ್ಪ, ಜಬೀನಾ ಖಾನಂ, ಮನ್ಸೂರ್ ಅಲಿ ಸೇರಿದಂತೆ ಇತರರು ಇದ್ದರು.

# ದುರ್ಗಾಂಬಿಕಾ ದೇವಿ ಜಾತ್ರೆ : 12 ಲಕ್ಷ ಭಕ್ತರಿಂದ ದೇವಿ ದರ್ಶನ



ದಾವಣಗೆರೆ, ಮಾ.3- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವವನ್ನು ಅತ್ಯಂತ ವಿಜೃಂಭಣೆ ಹಾಗೂ ಯಶಸ್ವಿಯಾಗಿ ಆಚರಿಸಲು ಸಹಕರಿಸಿದ ಸರ್ವರನ್ನು ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಟ್ರಸ್ಟ್ ಕೃತಜ್ಞತೆ ಸಲ್ಲಿಸಿದೆ.

ರಾಜ್ಯ, ಹೊರರಾಜ್ಯ ಹಾಗೂ ರಾಷ್ಟ್ರಗಳಿಂದ ಆಗಮಿಸಿದ್ದ ಸುಮಾರು 10 ರಿಂದ 12 ಲಕ್ಷ ಭಕ್ತರು ದೇವಿಯ ದರ್ಶನ ಪಡೆದಿದ್ದು, ಈ ಸಂದರ್ಭದಲ್ಲಿ ಉಚಿತ ನೀರಿನ ವ್ಯವಸ್ಥೆ ಮಾಡಿದ ಕೆ.ಎಲ್.ಪಿ ಸ್ವಾಮಿ ಅವರಿಗೆ, ಮಜ್ಜಿಗೆ ವಿತರಿಸಿದ ಯುವ ಕೇಂದ್ರದವರಿಗೆ, ಹಗಲಿರುಳು ಶ್ರಮಿಸಿದ ಕಾರ್ಯಕರ್ತರಿಗೆ, ದೇವಸ್ಥಾನ ಸಮಿತಿ ಗೌರವಾಧ್ಯಕ್ಷರೂ ಆದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಕಾರ್ಯಾಧ್ಯಕ್ಷ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಧರ್ಮದರ್ಶಿಗಳು ಕೃತಜ್ಞತೆ ಸಲ್ಲಿಸಿದ್ದಾರೆ.

# ನಗರದಲ್ಲಿ ಇಂದು ಚಿತ್ರಕಲಾ ಶಿಬಿರ

ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಇಂದಿನಿಂದ ಇದೇ ದಿನಾಂಕ 12 ರವರೆಗೆ ಬೇಸಿಗೆಯ ಚಿತ್ರಕಲಾ ಶಿಬಿರವು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1 ರವರೆಗೆ ಇರುತ್ತದೆ. ಪ್ರತಿದಿನ ಚಿತ್ರಕಲಾ ವಿಷಯದ ಒಂದೊಂದು ಕೌಶಲ್ಯವನ್ನು ಕಲಿಸಲಾಗುವುದು. ಅದರಲ್ಲಿ ರೇಖಾಚಿತ್ರ, ಪೆನ್ಸಿಲ್ ಸೇಡಿಂಗ್, ಕಲರಿಂಗ್, ಗ್ರೀಟಿಂಗ್, ಕೊಲ್ಯೇಜ್ ಕಲೆ, ಪೇಪರ್ ಕಟಿಂಗ್, ಗ್ಲಾಸ್ ಪೇಂಟಿಂಗ್ ಹೀಗೆ ಪ್ರತಿ ದಿನದ ವಿಶೇಷವಾಗಿದೆ.

# ಯೂರಿಯಾ ಹಗರಣದ ತನಿಖೆ

(3ನೇ ಪುಟದಿಂದ) ಭಾಗವಾಗಿ ಸಿಬಿಐ ಜೂನ್ 4, 1997ರಲ್ಲಿ ಇನ್ನೊಂದು ಪ್ರಕರಣ ದಾಖಲಿಸಿತ್ತು. ಇದರಲ್ಲಿ ಎನ್.ಎಫ್.ಎಲ್.ನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಸಿ.ಕೆ. ರಾಮಕೃಷ್ಣನ್ ಸೇರಿದಂತೆ ಹಲವು ಆರೋಪಿಗಳಿದ್ದರು. ಈ ಪ್ರಕರಣ ದಲ್ಲಿ ಯಾವುದೇ ನಷ್ಟವಾಗಿರುವುದು ಕಂಡು ಬಂದಿಲ್ಲ, ಪ್ರಕರಣಕ್ಕೆ ತೆರೆ ಎಳೆಯ ಬೇಕು ಎಂದು ಸಿಬಿಐ ಜನವರಿ 2021ರಲ್ಲಿ ನ್ಯಾಯಾಲಯಕ್ಕೆ ವರದಿ ನೀಡಿತ್ತು.

# ಏರುತ್ತಿರುವ ರಷ್ಯಾ ಸೈನಿಕರ ಸಾವು

(3ನೇ ಪುಟದಿಂದ) ನಂತರ ಸೈನ್ಯದ ಜನರಲ್‌ಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಹತರಾಗಿರುವುದು ಇದೇ ಮೊದಲು.

ರಷ್ಯಾ ಮತ್ತೆ 1.34 ಲಕ್ಷ ಸೈನಿಕರನ್ನು ಯುದ್ಧಕ್ಕೆ ರವಾನಿಸಿದೆ ಎಂದು ಹೇಳಲಾಗುತ್ತಿದೆ. ಇವರೆಲ್ಲ 18-27 ವರ್ಷದವರಾಗಿದ್ದು, ಯುದ್ಧ ಪರಿಸ್ಥಿತಿಯ ಅರಿವು ಕಡಿಮೆ ಎಂದೂ ವರದಿಗಳು ಹೇಳಿವೆ. ಇಡೀ ಯುದ್ಧದಲ್ಲಿ ರಷ್ಯಾ ತನ್ನ ಸೈನಿಕರ ಮನವೊಲಿಸುವಲ್ಲಿ ಸಫಲವಾಗುತ್ತಿಲ್ಲ ಎಂದು ವರದಿಗಳು ತಿಳಿಸಿವೆ.

# ಐ.ಎಂ.ಎ. ಕ್ರಿಕೆಟ್ : ಲಯನ್ಸ್‌ಗೆ ಪ್ರಶಸ್ತಿ

ದಾವಣಗೆರೆ, ಏ. 3 – ಐ.ಎಂ.ಎ. ವತಿಯಿಂದ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಮಂಡ್ಯ ಲಯನ್ಸ್ ತಂಡ ಪ್ರಶಸ್ತಿ ಪಡೆದು ಕೊಂಡಿದೆ. ಸುಮಾರು 30 ತಂಡಗಳು ಪಾಲ್ಗೊಂಡಿದ್ದ ಈ ಪಂದ್ಯಾವಳಿಯಲ್ಲಿ ಬೆಂಗಳೂರು ಬುಲ್ಸ್ ಎರಡನೇ ಸ್ಥಾನದಲ್ಲಿದೆ. ದಾವಣಗೆರೆ ಡಾನ್ಸ್ ತಂಡ ಮೂರನೇ ಸ್ಥಾನ ಪಡೆದುಕೊಂಡಿದೆ.

ಮಂಡ್ಯ ಲಯನ್ಸ್ ಹಾಗೂ ಬೆಂಗಳೂರು ಬುಲ್ಸ್ ನಡುವೆ ಎಸ್.ಎಸ್. ಹೈಟೆಕ್ ಆಸ್ಪತ್ರೆಯ ಮೈದಾನದಲ್ಲಿ ಅಂತಿಮ ಪಂದ್ಯ ನೆರವೇರಿತು. ದಾವಣಗೆರೆ ಐ.ಎಂ.ಎ. ಜಿಲ್ಲಾ ಅಧ್ಯಕ್ಷ ಡಾ. ಸೋಮಶೇಖರ್, ಕಾರ್ಯದರ್ಶಿ ಡಾ. ಚಂದನ್ ಗಿರಿಯಪ್ಪ, ಖಜಾಂಚಿ ಡಾ. ಅಖಿಲ್ ಕುಲಕರ್ಣಿ ಮತ್ತಿತರರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಕೊವ್ಯಾಕ್ಸಿನ್ ಪೂರೈಕೆಗೆ ಡಬ್ಲ್ಯೂ.ಹೆಚ್.ಓ. ತಡೆ

(3ನೇ ಪುಟದಿಂದ) ಮಾರ್ಚ್ 14, 2022ರಲ್ಲಿ ನಡೆಸಲಾದ ಪರೀಕ್ಷೆಯ ಅನ್ವಯ ಖರೀದಿ ನಿಲ್ಲಿಸುವ ನಿರ್ಧಾರ ತೆಗೆದುಕೊಂಡಿರುವುದಾಗಿ ವಿಶ್ವ ಆರೋಗ್ಯ ಸಂಘಟನೆ ಹೇಳಿದೆ. ಬೇಡಿಕೆ ಕಡಿಮೆಯಾಗಲಿರುವ ಹಿನ್ನೆಲೆಯಲ್ಲಿ ಲಸಿಕೆಯ ಉತ್ಪಾದನೆ ಕಡಿಮೆ ಮಾಡುವುದಾಗಿ ಭಾರತ್ ಬಯೋಟೆಕ್ ಏಪ್ರಿಲ್ 1ರಂದು ತಿಳಿಸಿತ್ತು.

# ನಗರದಲ್ಲಿ ಇಂದು

ಕಲಾಕುಂಚ ಸಾಂಸ್ಕೃತಿಕ ಮಹಿಳಾ ವಿಭಾಗದ ವತಿಯಿಂದ ಏರ್ಪಡಿಸಿದ್ದ ಮನೆಯಂಗಳದಲ್ಲಿ ಉಚಿತ ರಂಗೋಲಿ ಸ್ಪರ್ಧೆ ಮತ್ತು ದಾವಣಗೆರೆ ಗೃಹಿಣಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭವು ಇಂದು ಸಂಜೆ 6 ಗಂಟೆಗೆ ಹೋಟೆಲ್ ಪಂಜುರ್ಲಿ ಸಭಾಂಗಣದಲ್ಲಿ ನಡೆಯಲಿದೆ.

ಉದ್ಘಾಟನೆ : ಡಾ|| ಶಶಿಕಲಾ ಕೃಷ್ಣಮೂರ್ತಿ. ಅಧ್ಯಕ್ಷತೆ : ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ. ಮುಖ್ಯ ಅತಿಥಿ : ಡಾ|| ಆರತಿ ಸುಂದರೇಶ್.

# ನಗರದಲ್ಲಿ ಸಿದ್ಧೇಶ್ವರ ಶ್ರೀಗಳ ಪ್ರವಚನ ನಡೆಸುವಂತೆ ಭಕ್ತರ ಮನವಿ



ದಾವಣಗೆರೆ, ಮಾ.3- ನಗರ ಮತ್ತು ತಾಲ್ಲೂಕಿನ ಭಕ್ತ ವೃಂದದವರ ಅಪೇಕ್ಷೆ ಮೇರೆಗೆ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಅಧ್ಯಾತ್ಮಿಕ ಪ್ರವಚನ ಮತ್ತೊಮ್ಮೆ ನಡೆಯುವಂತಾಗಲಿ ಎಂದು ಭಕ್ತವೃಂದದ ಪರವಾಗಿ ಎಸ್.ಟಿ. ಕುಸುಮಶ್ರೇಷ್ಠಿ, ಎನ್.ಜಿ. ಪುಟ್ಟಸ್ವಾಮಿ, ಪಲ್ಲಾಗಟ್ಟಿ, ರಾಜಣ್ಣ ಅಜ್ಜಂಪುರ ಶೆಟ್ರು, ಷಡಾಕ್ಷರಿ, ಅಜ್ಜಂಪುರ ಶೆಟ್ರು, ಓಂಕಾರಪ್ಪ, ಆನೆಕೊಂಡದ ಮಹಾದೇವಪ್ಪ, ಎಂ.ಕೆ. ಶಿವಕುಮಾರ ಮತ್ತಿತರರು ನಿಪ್ಪಾಣಿಯಲ್ಲಿ ಭಿನ್ನವಿಸಿಕೊಂಡಿದ್ದಾರೆ.

ಕಳೆದ 7-8 ವರ್ಷಗಳ ಹಿಂದೆ ದಾವಣಗೆರೆಯಲ್ಲಿ ಪ್ರವಚನ ನಡೆದಿತ್ತು. ಇದೀಗ ಮತ್ತೆ ನಡೆಸಿಕೊಡುವಂತೆ ಶ್ರೀಗಳಲ್ಲಿ ಮನವಿ ಮಾಡಿದ್ದಾರೆ.

# ಪ್ರಕಾಶ ಕೋಳಿವಾಡರ ಹುಟ್ಟುಹಬ್ಬ



ರಾಣೇಬೆನ್ನೂರು

ರಾಣೇಬೆನ್ನೂರು, ಏ.3- ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕೋಳಿವಾಡ ಅವರ ಹುಟ್ಟುಹಬ್ಬವನ್ನು ವಿಶೇಷ ರೀತಿಯಲ್ಲಿ ಆಚರಿಸಲು ನಿರ್ಣಯಿಸಲಾಗಿದೆ ಎಂದು ಅವರ ಅಭಿಮಾನಿ ಬಳಗದ ನಗರಸಭೆ ಸದಸ್ಯ ಪುಟ್ಟಪ್ಪ ಮರಿಯಮ್ಮನವರ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಾಡಿದ್ದು ದಿನಾಂಕ 5 ರಂದು ನಡೆಯುವ ಈ ಕಾರ್ಯಕ್ರಮದಲ್ಲಿ ಐದುನೂರು ಯುವಕರು ನೇತ್ರದಾನ ಮಾಡಲಿದ್ದಾರೆ. ಆರೋಗ್ಯ ಘಟಕಗಳಿಲ್ಲದ ತಾಲ್ಲೂಕಿನ 60 ಗ್ರಾಮಗಳಿಗೆ ಉಚಿತ ಸಂಚಾರಿ ಆಸ್ಪತ್ರೆ, ಅಂಧ ಮಕ್ಕಳ ದತ್ತು ಸ್ವೀಕರಿಸಿ ಉಚಿತ ಶಿಕ್ಷಣ ಹಾಗೂ ಗ್ರಾಪಂ ಮಟ್ಟದಲ್ಲಿ ಆರೋಗ್ಯ ಶಿಬಿರ ಏರ್ಪಡಿಸಲಾಗುವುದು ಎಂದು ಪುಟ್ಟಪ್ಪ ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಸವರಾಜ ಹುಚ್ಚಗೊಂಡರ, ಲಿಂಗರಾಜ ಕೋಡಿಹಳ್ಳಿ, ರಮೇಶ ಬಿಸಲಳ್ಳಿ, ಶೇಖಪ್ಪ ಹೊಸಗೌಡ್ರ ಮತ್ತಿತರರಿದ್ದರು.

# 9 ವರ್ಷಗಳಲ್ಲಿ 90 ವರ್ಷಗಳ ಸಾಧನೆ ಮಾಡಿದ ಪುಣ್ಯಾನಂದಪುರಿ ಶ್ರೀ

## ವಾಲ್ಮೀಕಿ ಗುರುಪೀಠದಲ್ಲಿನ ಪುಣ್ಯಾರಾಧನೆಯಲ್ಲಿ ಟಿ. ಓಬಳಪ್ಪ ಸ್ಮರಣೆ

ಮಲೇಬೆನ್ನೂರು. ಏ.3- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿರುವ ಲಿಂಗೈಕ್ಯ ಶ್ರೀ ಪುಣ್ಯಾನಂದಪುರಿ ಶ್ರೀಗಳವರ ಗದ್ದುಗೆಗೆ ಅವರ 15ನೇ ವರ್ಷದ ಪುಣ್ಯಾರಾಧನೆ ಅಂಗವಾಗಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ ಮಾತನಾಡಿ, ಲಿಂಗೈಕ್ಯ ಶ್ರೀಗಳು ಕೇವಲ 9 ವರ್ಷಗಳಲ್ಲಿ 90 ವರ್ಷಗಳ ಸಾಧನೆ ಮಾಡಿಹೋಗಿದ್ದಾರೆ ಎಂದರು.

ಜಿ.ಪಂ. ಮಾಜಿ ಸದಸ್ಯ ಎ.ಹೆಚ್. ಕುಬೇರಪ್ಪ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯಕುಮಾರ್, ಶ್ರೀಮತಿ ಸುಮಿತ್ರ ಕೋಂ ದಿ. ಕೆ.ಹೆಚ್. ಓಬಳಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಮಠದ ಧರ್ಮದರ್ಶಿ ಕೆ.ಬಿ. ಮಂಜುನಾಥ್,



ಹರಿಹರ ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷ ಕೆ.ಆರ್. ರಂಗಪ್ಪ, ಹರಿಹರ ನಗರಸಭೆ ಸದಸ್ಯ ದಿನೇಶ್‌ಬಾಬು, ಮಹಿಳಾ ಮುಖಂಡರಾದ ಪಾರ್ವತಿ, ಶಿಕ್ಷಕರಾದ ಜಿ.ಆರ್. ನಾಗರಾಜ್, ವಾಸನದ ಮಹಾಂತೇಶ್, ರಾಜನಹಳ್ಳಿ ಭೀಮಣ್ಣ, ಬೆಣ್ಣೇರ ನಂದ್ಯೆಪ್ಪ, ಉಕ್ಕಡಗಾತ್ರಿ ಪ್ರಕಾಶ್, ಕನ್ನಡ ಶಿಕ್ಷಕ ಟಿ. ಶಶಿಧರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

**ಸಭೆ :** ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಭಾನುವಾರ 53ನೇ ದಿನಕ್ಕೆ ಕಾಲಿಟ್ಟಿತ್ತು.




ಮುಸ್ಸಂಜೆಯಲ್ಲಿ ಮನೆಯಂಗಳದಿ ಕುಳಿತು ಬಾನಂಗಳದಲ್ಲಿನ ಯುಗಾದಿ ತಿಂಗಳನ ದರ್ಶನಕ್ಕಾಗಿ ಕಾತರಿಸುತ್ತಿದ್ದ ತಂದೆಗೆ ನೆರವಾದ ಪುತ್ರ.

## ಹೆಚ್. ಹರ್ಷಿತಾಗೆ ಐದು ಚಿನ್ನದ ಪದಕ



ದಾವಣಗೆರೆ, ಏ.3- ಈಚೆಗೆ ನಡೆದ ಮೈಸೂರು ವಿಶ್ವವಿದ್ಯಾನಿಲಯದ 12ನೇ ಘಟಿಕೋತ್ಸವದಲ್ಲಿ ಹೆಚ್. ಹರ್ಷಿತ ಎಂ. ಎಸ್ಸಿ ಭೌತಶಾಸ್ತ್ರ ವಿಭಾಗದಲ್ಲಿ ಐದು ಚಿನ್ನದ ಪದಕಗಳನ್ನು ಪಡೆದಿದ್ದಾರೆ. ಇದರ ಜೊತೆಗೆ ಜಿಎಟಿಇ ಮತ್ತು ಸಿಎಸ್ಐಆರ್, ಯುಜಿಸಿ ಹಾಗೂ ಎನ್ಇಟಿ ಪರೀಕ್ಷೆಗಳಲ್ಲಿಯೂ ಉತ್ತೀರ್ಣರಾಗಿರುವ ಹರ್ಷಿತ, ಮೂಲತಃ ದಾವಣಗೆರೆ ವಿನೋಬನಗರದ ಎಂ. ನಾಗರಾಜ್ ಮತ್ತು ಶ್ರೀಮತಿ ಮಂಜುಳಾ ದಂಪತಿ ಪುತ್ರಿ.

## ರಾಜ್ಯ ವೀರಶೈವ ಪಂಚಮಸಾಲಿ ಸಮಾಜಕ್ಕೆ ನೇಮಕ



ಹೊನ್ನಾಳಿ, ಏ.3- ವೀರಶೈವ ಪಂಚಮ ಸಾಲಿ ಸಮಾಜದ ರಾಜ್ಯ ಉಪಾಧ್ಯಕ್ಷರನ್ನಾಗಿ ಹೊನ್ನಾಳಿ ಪಟ್ಟಣಶೆಟ್ಟಿ ಪರಮೇಶ್ ನೇಮಕಗೊಂಡಿದ್ದಾರೆ ಎಂದು ವೀರಶೈವ ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಜಿ.ಪಿ. ಪಾಟೀಲ್ ಅವರು ತಿಳಿಸಿದ್ದಾರೆ.

### ರಂಜಾನ್ ರೋಜಾ ಸಮಯ

ದಿನಾಂಕ 04.04.2022
ಇಫ್ತೇಯಾರಿ ಸಮಯ : 6-42

ದಿನಾಂಕ 05.04.2022
ಸಹೇರಿ ಸಮಯ : 5-02

## 11ನೇ ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ

ನವದೆಹಲಿ, ಏ. 3 – ಕಳೆದ ಎರಡು ವಾರಗಳಲ್ಲಿ 11ನೇ ಬಾರಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಮಾಡಿರುವುದರಿಂದ, ದೇಶದ ಬಹುತೇಕ ಪ್ರಮುಖ ನಗರಗಳಲ್ಲಿ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದೆ. ಭಾನುವಾರ ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು 80 ಪೈಸೆ ಹೆಚ್ಚಿಸಲಾಗಿದೆ. ಎರಡು ವಾರಗಳಲ್ಲಿ ತೈಲ ದರ 8 ರೂ.ಗಳಷ್ಟು ಹೆಚ್ಚಾಗಿದೆ.

ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ತೈಲ ಬೆಲೆಯಲ್ಲಿ ವ್ಯತ್ಯಾಸವಾಗಲಿದೆ. ಚುನಾವಣೆ ಹಿನ್ನೆಲೆಯಲ್ಲಿ ನಾಲ್ಕೂವರೆ ತಿಂಗಳ ಕಾಲ ತೈಲ ದರ ಪರಿಷ್ಕರಣೆ ಮಾಡಿರಲಿಲ್ಲ. ಕಳೆದ ಎರಡು ವಾರಗಳಲ್ಲಿ ತೈಲ ಬೆಲೆ ನಿರಂತರ ಏರಿಕೆಯಾಗುತ್ತಿದೆ. ಆಂಧ್ರ ಪ್ರದೇಶದ ಚಿತ್ತೂರಿನಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ ದೇಶದಲ್ಲೇ ಅತಿ ಹೆಚ್ಚಿನ 115.52 ರೂ. ಆಗಿದೆ. ಪೆಟ್ರೋಲ್ ಬೆಲೆ ರಾಜಸ್ಥಾನದ ಶ್ರೀ ಗಂಗಾನಗರದಲ್ಲಿ 120.65 ರೂ. ಆಗಿದೆ.

## 6 ರಂದು ಶ್ರೀ ಬಕ್ಕೇಶ್ವರ ರಥೋತ್ಸವ

ದಾವಣಗೆರೆ, ಏ.3- ನಗರದ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 6 ರ ಬುಧವಾರ ಸಂಜೆ 6 ಗಂಟೆಗೆ ನಡೆಯುವುದು. ನಾಡಿದ್ದು ದಿನಾಂಕ 5 ರ ಮಂಗಳವಾರ ಶ್ರೀ ಮಹಾಸ್ವಾಮಿಯ ಗಜವಾಹನ ಮಹೋತ್ಸವ ನಡೆಯುವುದು.


YOGI RAM
SHASHI EDUCATIONAL TRUST(R)
LALITHA PRE UNIVERSITY COLLEGE
LALITHA INTERNATIONAL PUBLIC SCHOOL
Lokikere Main Road,Davanagere-577005

WANTED

Candidates who are dynamic and committed to their proficiency in the subject (s) are eligible to apply for any of the following posts:

| Position | Minimum Qualification | Experience |
|---|---|---|
| Pre-Primary Educators | Graduate with NTT | 3Years |
| Primary Educators | Graduate with B.ED | 3Years |
| TGT/PGT's Social,Mathematics, Science,English,Kannada & Hindi | B.A, B.Ed/BSc,B.Ed/M.A/M.Sc. | 3Years |
| Physical Instructor | B.P.Ed/M.P.Ed | 3Years |
| Librarian | B.Lib.Sc./M.Lib.Sc. | 3Years |
| Drawing/Music/Karate Yoga/Abacus/Computer | Certificate from the recognized board or Govt, | 3Years |
| P.C.M.B Lecturers, PU College | M Sc, B Ed. | 5Years |
| Hostel wardens (Male and Female) | Any Graduate (Fresher/Experienced) | |

WALK IN INTERVIEW
DATE :04-04-2022 & 09-04-2022 TIME:10.00am to 4.00pm.
VENUE :LALITHA INTERNATIONAL PUBLIC SCHOOL,DAVANAGERE
Contact No:9980629965,7022004109



WANTED
B.Com / M.Com
GRADUATE
Contact
70220 04042, 70220 04109



ssims
SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
ದಿನಾಂಕ: ಗುರುವಾರ, 7ನೇ ಏಪ್ರಿಲ್ 2022

ಡಾ. ನವೀನ್ ತಹಶೀಲ್ದಾರ್
MS(Ortho), AOA Fellow (Melbourne, Australia), Combined Neurosurgery & Orthopedic Spine Fellowship (Amrita Institute, Kochi)
ಬೆನ್ನುಹುರಿ ಶಸ್ತ್ರಚಿಕಿತ್ಸಕರು
ದಿನಾಂಕ: ಗುರುವಾರ, 7ನೇ ಏಪ್ರಿಲ್ 2022

ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

### ಮೂರನೇ ವರ್ಷದ ಪುಣ್ಯಸ್ಮರಣೆ



ಜನನ : 1939 ಲಿಂಗೈಕ್ಯ : 3-4-2019

**ದಿ|| ಶ್ರೀಮತಿ ಬಿ.ಆರ್. ಶಾಂತಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ನಿಮ್ಮ ನೆನಪು ನಮ್ಮೆಲ್ಲರ ಹೃದಯಗಳಲ್ಲಿ ಹಚ್ಚ ಹಸಿರಾಗಿದೆ.
ಹುಟ್ಟು ಸಾವುಗಳ ನಡುವೆ ನೀವು ಬಿಟ್ಟು ಹೋದ ಆದರ್ಶಗಳೇ ನಮಗೆ ದಾರಿದೀಪ.

ಸದಾ ನಿಮ್ಮನ್ನು ಸ್ಮರಿಸುತ್ತಿರುವ
ಪತಿ : ಶ್ರೀ ಬಿ.ಎಂ. ರುದ್ರಮುನಿ, ನಿವೃತ್ತ ಕೆ.ಇ.ಬಿ. ಚೀಫ್ ಇಂಜಿನಿಯರ್
ಪುತ್ರ : ಶ್ರೀ ಬಿ.ಆರ್. ಪ್ರಭುದೇವ, ಶ್ರೀಮತಿ ಮಧು
ಪುತ್ರಿ : ಶ್ರೀಮತಿ ಕಲ್ಪನಾ, ಶ್ರೀ ಬಸವರಾಜ್ ಹಿರೇಮಠ
ಮೊಮ್ಮಕ್ಕಳು : ನವ್ಯ, ಕಾರ್ತಿಕ್, ವರುಣ್, ವಿಕಾಸ್
ಬನ್ನಿಕಲ್‌ಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು.

॥ ಶ್ರೀ ವೀರಭದ್ರೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



**ದಿ|| ಶ್ರೀಮತಿ ಗಿರಿಜಾ ಮಲ್ಲಿಕಾರ್ಜುನಯ್ಯ ಹನಗೋಡಿಮಠ**

ಜನನ: 24.10.1949 ನಿಧನ: 01.04.2022

ದಾವಣಗೆರೆ ವಿದ್ಯಾನಗರ ವಾಸಿ ಹನಗೋಡಿಮಠದ
ಶ್ರೀ ಮಲ್ಲಿಕಾರ್ಜುನಯ್ಯ ಪಿ. ಹನಗೋಡಿಮಠ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 01.04.2022ರ ಶುಕ್ರವಾರ ಮುಂಜಾನೆ
ನನ್ನ ಧರ್ಮಪತ್ನಿಯಾದ
ನೇತ್ರದಾನಿ
ಶ್ರೀಮತಿ ಗಿರಿಜಾ ಮಲ್ಲಿಕಾರ್ಜುನಯ್ಯ ಹನಗೋಡಿಮಠ
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 05.04.2022ರ ಮಂಗಳವಾರದಂದು ದಾವಣಗೆರೆ ವಿದ್ಯಾನಗರದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ಶ್ರೀ ಮಲ್ಲಿಕಾರ್ಜುನಯ್ಯ ಪಿ. ಹನಗೋಡಿಮಠ
ಹಾಗೂ ಸಹೋದರ, ಸಹೋದರಿಯರು
ಮತ್ತು ಮಕ್ಕಳು, ಮೊಮ್ಮಕ್ಕಳು ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


/bolas.outlet www.bolas.co.in
Bolas
THE FACTORY OUTLET
DRYFRUITS & NUTS
ಇದೀಗ ದಾವಣಗೆರೆಯಲ್ಲಿ
ವಿಶ್ವದ ತಾಜಾ ಡ್ರೈ ಫ್ರೂಟ್ಸ್ & ನಟ್ಸ್ ಫ್ಯಾಕ್ಟರಿ ದರದಲ್ಲಿ

| | | | | |
|---|---|---|---|---|
| ಮೊಲ್ಸಿಸ್ ಕಿಮಿಯಾ ಖರ್ಜೂರ | 500g | Save 33% | ₹ 135 | ₹ 200 |
| ಆರ್.ಯು ನಟ್ಸ್ ಬಾದಾಮಿ | 250g | Save 33% | ₹ 195 | ₹ 290 |
| ಆರ್.ಯು ನಟ್ಸ್ ಗೋಡಂಬಿ 320 | 250g | Save 34% | ₹ 195 | ₹ 295 |
| ಮೊಲ್ಸಿಸ್ ಜಹಿದಿ ಕರ್ಜೂರ | 500g | Save 44% | ₹ 90 | ₹ 160 |
| ಮೊಲ್ಸಿಸ್ ಸಾಲ್ಟೆಡ್ ಪಿಸ್ತಾ | 200g | Save 40% | ₹ 225 | ₹ 375 |
| ಮೊಲ್ಸಿಸ್ ವಾಲ್ನಟ್ಸ್ | 200g | Save 12% | ₹ 305 | ₹ 345 |
| ಆರ್.ಯು ನಟ್ಸ್ ಒಣದ್ರಾಕ್ಷಿ | 250g | Save 26% | ₹ 85 | ₹ 115 |
| ಮೊಲ್ಸಿಸ್ ಸಾಲ್ಟೇಡ್ ಬಾದಾಮಿ | 200g | Save 36% | ₹ 225 | ₹ 350 |
| ಮೊಲ್ಸಿಸ್ ಸಾಲ್ಟೇಡ್ ಕುಂಬಳಕಾಯಿ ಬೀಜ | 200g | Save 38% | ₹ 170 | ₹ 275 |
| ಮೊಲ್ಸಿಸ್ ಕ್ರಾನ್ಬೆರಿಗಳು | 200g | Save 30% | ₹ 185 | ₹ 265 |
| ಮೊಲ್ಸಿಸ್ ಬ್ಲ್ಯಾಕ್ ಚಿಯಾ ಬೀಜ | 200g | Save 27% | ₹ 80 | ₹ 110 |
| ಮೊಲ್ಸಿಸ್ ಅಫ್ಘಾನ್ ಅಂಜುರ | 250g | Save 23% | ₹ 290 | ₹ 375 |

ವಸ್ತುಗಳ ದರಗಳ ವಾಯಿದೆ ತಾ. 9ನೇ ಎಪ್ರಿಲ್, 2022 ರವರೆಗೆ ಮಾತ್ರ. ಷರತ್ತುಗಳು ಅನ್ವಯ*
ಪ್ರಸಾದ್ ಏಜೆನ್ಸಿಸ್, ಮೇಡಾ ಸ್ಕ್ವಯರ್, ವಿದ್ಯಾರ್ಥಿ ಭವನ ಸರ್ಕಲ್, ಹದಡಿ ರೋಡ್ ದಾವಣಗೆರೆ-577003 | +91 9113091031

KEDINJE 6362394404 | KUNDAPURA 7892059737 | KARKALA 7892279547 | UDUPI 8951372777 | SURATHKAL 9731220707 |BEJAI 9731665123 | PANDESHWAR 8660824819
DERALAKATTE 8073267045 | CHENNAPATNA 9483548777 | HOSPETE 8197461265 | GULBARGA 8310843332 | DAVANAGERE 9113091031 | GOA 9373497795 |
BANGALORE 9606019779 | GANGAVATHI 9036370085 | HUBLI 9880088483 | DAHISAR 7777088446 | VASHI 8390970700
/bolas.outlet
www.bolas.co.in


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte